ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

13 ಫೆಬ್ರವರಿ 2026 ಶುಕ್ರವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 329 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ನವದೆಹಲಿಯಲ್ಲಿ ಗುರುವಾರ ನಮಿಬಿಯಾ ವಿರುದ್ಧ ನಡೆದ ಟಿ-20 ವಿಶ್ವಕಪ್ ಪಂದ್ಯದಲ್ಲಿ ದಾಖಲೆಯ ಅರ್ಧ ಶತಕ (24ಕ್ಕೆ 61) ಗಳಿಸಿದ ಭಾರತದ ಇಶಾನ್ ಕಿಶನ್... ಭಾರತ 209ಕ್ಕೆ 9...

ಹೀರೊ ಆಗಿ ಚಿತ್ರರಂಗಕ್ಕೆ ಉಪೇಂದ್ರ ಮಗ ಎಂಟ್ರಿ » 2

ಅರಸೀಕೆರೆ : ಒಳಾಂಗಣ ಕ್ರೀಡಾಂಗಣ ಕಾಮಗಾರಿಗೆ ಚಾಲನೆ » 3

ಸಾರ್ವತ್ರಿಕ ಮುಷ್ಕರ : ಕೇಂದ್ರದ ವಿರುದ್ಧ ಎಡಪಕ್ಷಗಳಿಂದ ರಸ್ತೆ ತಡೆ » 4

ಹೈಕಮಾಂಡ್ ನಾಯಕರೊಂದಿಗೆ ಡಿ.ಕೆ.ಶಿ. ಚರ್ಚೆ

ದೆಹಲಿಗೆ ಬಂದಿದ್ದೇ ರಾಜಕೀಯ ಮಾಡಲು | ಅಂತಿಮ ಘಟ್ಟಕ್ಕೆ ಸಿ.ಎಂ. ಕುರ್ಚಿ ವಿವಾದ

• ಪ್ರಜೋದಯ ವರದಿ

ನವದೆಹಲಿ: ದೆಹಲಿಗೆ ಬಂದಿರುವುದೇ ರಾಜಕೀಯ ಮಾಡಲು, ಎಲ್ಲಾ ವಿಚಾರಗಳನ್ನು ಮಾತನಾಡದೆ ವಾಪಾಸ್ ಹೋಗುವುದಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಗುಡಿಗಿದ್ದು, ಮುಖ್ಯಮಂತ್ರಿ ಸ್ಥಾನಕ್ಕಾಗಿ ಕಳೆದ ನಾಲ್ಕು ತಿಂಗಳಿಂದ ನಡೆಯುತ್ತಿರುವ ಪ್ರಹಸನ ಅಂತಿಮ ಘಟ್ಟಕ್ಕೆ ತಲುಪಿದೆ.

ಗುರುವಾರ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ನಿವಾಸದಲ್ಲಿ ಹೈಕಮಾಂಡ್ ನಾಯಕರ ಜೊತೆ ಸುಮಾರು ಅರ್ಧ ಗಂಟೆಗೂ ಹೆಚ್ಚು ಕಾಲ ಮಾತುಕತೆ ನಡೆಸಿದ ನಂತರ ಸುದ್ದಿಗಾರ ರೊಂದಿಗೆ ಮಾತನಾಡಿದ ಅವರು, ಏನು ಮಾತನಾಡಬೇಕೋ ಅದೆಲ್ಲವನ್ನೂ ಮಾತನಾಡಿದ್ದೇನೆ. ಏನೇನು ಚರ್ಚೆ ನಡೆಯಿತು ಎಂಬುದನ್ನೆಲ್ಲ ಇಲ್ಲಿ ಹೇಳಲಾಗದು ಎಂದರು.

ಅಸ್ಸಾಂ ಚುನಾವಣಾ ಬಗ್ಗೆ ಚರ್ಚೆ ಮಾಡಲು ಸೋನಿಯಾಗಾಂಧಿ ನಿವಾಸಕ್ಕೆ ಆಗಮಿಸಿದ್ದೇವು. ಅಸ್ಸಾಂನಲ್ಲಿ ವಾಪಾಸ್ ಕಾಂಗ್ರೆಸ್ ಸರ್ಕಾರ ಬರಲಿದೆ. ಯಾರ ಜೊತೆಗೆ ಏನು ಮಾತನಾಡಿದೆ ಎಂದು ಇಲ್ಲಿ ಹೇಳುವುದಿಲ್ಲ. ಬೀದಿಯಲ್ಲಿ ನಿಂತು ಎಲ್ಲಾ ಮಾತನಾಡುವ ಅಗತ್ಯವಿಲ್ಲ. ದೆಹಲಿಗೆ ಬಂದ ಮೇಲೆ ಏನೇನ್ನು ಮಾತನಾಡಬೇಕೋ ಅದನ್ನೆಲ್ಲ ಮಾತನಾಡಿದ್ದೀನಿ ಎಂದು ಹೇಳಿದರು.

ಕರ್ನಾಟಕ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾವು ರಾಜಕಾರಣದ ಲ್ಲಿದ್ದೇವೆ, ರಾಜಕಾರಣ ಮಾಡಲೇಬೇಕು. ನನಗೆ ಸದಾ ಯಶಸ್ಸು ಸಿಗುತ್ತದೆ. ಸ್ವಲ್ಪ ಶ್ರಮ ಬೇಕಾಗುತ್ತದೆ ಅಷ್ಟೇ ಎಂದರು.

ನಿಮ್ಮ ಭೇಟಿ ಫಲಪ್ರದವಾಗಿದೆಯೇ, ಅಧಿಕಾರ ಹಂಚಿಕೆ ವಿಚಾರವಾಗಿ ಹೈಕಮಾಂಡ್ ನಿಂದ ಸ್ಪಷ್ಟನೆ

ಸಿಕ್ಕಿದೆಯೇ ಎಂದು ಕೇಳಿದಾಗ, ನಾವು ಈ ವಿಚಾರವಾಗಿ ಚರ್ಚೆ ಮಾಡಿಲ್ಲ. ಪಕ್ಷ ತನ್ನದೇ ಆದ ಗುರಿ ಹೊಂದಿದ್ದು, ಪಕ್ಷದ ಯಶಸ್ಸು, ಹಿತಾಸಕ್ತಿ, ಕರ್ನಾಟಕ ಹಾಗು ದೇಶದ ಹಿತದೃಷ್ಟಿ ಆಧಾರದ ಮೇಲೆ ನಮ್ಮ ನಾಯಕರಾದ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರು ಸೂಕ್ತ ಸಮಯದಲ್ಲಿ ತೀರ್ಮಾನ ಮಾಡುತ್ತಾರೆ. ಮಾಧ್ಯಮಗಳು ಹಾಗು ಬೇರೆಯವರು ಈ ಭೇಟಿಗೆ ಹೊಸ ರೂಪ, ಬೇರೆ ಬಣ್ಣ ನೀಡುತ್ತಿದ್ದೀರಿ. ನಮಗೆ ಅದರಲ್ಲಿ ವಿಶೇಷವಿಲ್ಲ ಎಂದರು.

ಹೈಕಮಾಂಡ್ ನಾಯಕರ ಭೇಟಿ ಬಗ್ಗೆ ಪ್ರತಿಕ್ರಿಯಿಸಿ, ನಾನು ದೆಹಲಿಗೆ ಬಂದ ನಂತರ ಎಲ್ಲರನ್ನೂ ಭೇಟಿ ಮಾಡುತ್ತೇನೆ. ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಕೆ.ಸಿ.ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲ, ಟಿ.ಬಿ.ಜಯಚಂದ್ರ ಸೇರಿ ಎಲ್ಲರನ್ನು ಭೇಟಿ ಮಾಡಿರುವೆ. ರಾಜಕಾರಣಿಗಳು ಭೇಟಿಯಾದಾಗ ರಾಜಕಾರಣ ಚರ್ಚೆ ಮಾಡದೇ ಇರುತ್ತಾರಾ? ರಾಜಕೀಯ ಚರ್ಚೆ ಮಾಡುತ್ತೇವೆ. ಆದರೆ ಆ ಚರ್ಚೆಯ ವಿವರವನ್ನು ಮಾಧ್ಯಮಗಳ ಮುಂದೆ ಬಹಿರಂಗ ಪಡಿಸಲಾರೆ ಎಂದರು.

ಶಾಸಕರು ವಿದೇಶ ಪ್ರವಾಸಕ್ಕೆ ಹೋಗುತ್ತಿರುವ ಬಗ್ಗೆ ಪ್ರತಿಕ್ರಿಯಿಸಿ, ಈ ವಿಚಾರವಾಗಿ ನಾನು ಏನನ್ನೂ ಮಾತನಾಡುವುದಿಲ್ಲ. ಶಾಸಕರುಂಟು ಹಾಗು ಮುಖ್ಯಮಂತ್ರಿಯುಂಟು. ಅವರಿಗೆ ಯಾರು ಮಾರ್ಗದರ್ಶನ ನೀಡಿದ್ದಾರೋ ಗೊತ್ತಿಲ್ಲ. ಈ ವಿಚಾರ ನನ್ನ ಜೊತೆ ಚರ್ಚೆಯಾಗಿಲ್ಲ. ಮಾಧ್ಯಮಗಳಿಂದ ಈ ವಿಷಯ ತಿಳಿಯುತ್ತಿದ್ದೇನೆ ಹೊರತು, ಬೇರೆ ಯಾರು ಈ ಬಗ್ಗೆ ಮಾಹಿತಿ ನೀಡಿಲ್ಲ ಎಂದು ಸ್ಪಷ್ಟಪಡಿಸಿದರು.

ವರಿಷ್ಠರೊಂದಿಗೆ ಪ್ರತ್ಯೇಕ ಚರ್ಚೆ

ಡಿ.ಕೆ.ಶಿವಕುಮಾರ್ ಅವರು ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಅವರನ್ನು ಭೇಟಿ ಮಾಡಿ ಪ್ರತ್ಯೇಕವಾಗಿ ಚರ್ಚೆ ನಡೆಸಿದರು. ಸೋನಿಯಾ ಗಾಂಧಿ ಅವರು ಡಿ.ಕೆ.ಶಿವಕುಮಾರ್ ಪರ ಒಲವು ಹೊಂದಿದ್ದಾರೆ ಎಂದು ಕಾಂಗ್ರೆಸ್ ಉನ್ನತ ಮೂಲಗಳು ತಿಳಿಸಿವೆ.

ಆನ್‌ಲೈನ್ ಹರಾಜು ತೂಗುಗತ್ತಿ: ಕಾಫಿ ಬೆಳೆಗಾರರು ಪಾರು

• ಪ್ರಜೋದಯ ವರದಿ

ನವದೆಹಲಿ: ಕಾಫಿ ತೋಟಗಳ ಆನ್‌ಲೈನ್ ಹರಾಜು ಪ್ರಕ್ರಿಯೆಯನ್ನು ತಕ್ಷಣವೇ ಸ್ಥಗಿತಗೊಳಿಸುವಂತೆ ಬ್ಯಾಂಕ್‌ಗಳಿಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಆದೇಶಿಸಿದ್ದಾರೆ.

ಈ ಮೂಲಕ SARFAESI ಕಾಯ್ದೆ ಅಡಿಯಲ್ಲಿ ONLINE ಹರಾಜಿನ ತೂಗುಗತ್ತಿಯಿಂದ ಕಾಫಿ ಬೆಳೆಗಾರರು ಪಾರಾಗಿದ್ದಾರೆ. ರಾಜ್ಯಸಭೆ ಸದಸ್ಯ, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ಸಂಸದರಾದ ಕೋಟಾ ಶ್ರೀನಿವಾಸ ಪೂಜಾರಿ, ಡಾ|| ಸಿ.ಎನ್. ಮಂಜುನಾಥ್, ವಿಶ್ವೇಶ್ವರ ಹೆಗಡೆ ಕಾಗೇರಿ ಹಾಗು ಮಲ್ಲೇಶಬಾಬು ಅವರ ನೇತೃತ್ವದಲ್ಲಿ ಕರ್ನಾಟಕ ಕಾಫಿ ಬೆಳೆಗಾರರ ಒಕ್ಕೂಟದಿಂದ ವಿತ್ತ ಸಚಿವೆಯನ್ನು ಭೇಟಿಯಾಗಿ SARFAESI ಕಾಯ್ದೆಯ ದುಷ್ಪರಿಣಾಮಗಳ ಕುರಿತು ವಿವರಿಸಲಾಯಿತು.

ಶೇ.95ಕ್ಕೂ ಹೆಚ್ಚು ಸಣ್ಣ-ಅತಿ ಸಣ್ಣ ಬೆಳೆಗಾರರನ್ನು ಹೊಂದಿರುವ ಕಾಫಿ ಕೃಷಿ ಕ್ಷೇತ್ರದ ಸಾಲಗಾರರಿಗೆ ಮಾರಕವಾಗಿ ಪರಿಣಮಿಸಿರುವ ಸರ್ಫೇಸಿ ಕಾಯ್ದೆ, ಕೆಲವು ಬ್ಯಾಂಕ್, ಮಧ್ಯವರ್ತಿಗಳು ಈ ಕಾಯ್ದೆಯ ದುರುಪಯೋಗ ಮಾಡುತ್ತಿರುವ ಕುರಿತು ಸಚಿವರ ಗಮನಕ್ಕೆ ತರಲಾಯಿತು.

ಈ ವೇಳೆ ಮಾತನಾಡಿದ ನಿರ್ಮಲಾ ಸೀತಾರಾಮನ್ ಅವರು, ಕಾಫಿ ಕೃಷಿ ಸಾಲದ ವಸೂಲಾತಿಗೆ ಸರ್ಫೇಸಿ ಕಾಯ್ದೆ ಬಳಕೆ ಬಗ್ಗೆ ಪರಿಶೀಲಿಸುವುದಾಗಿ ತಿಳಿಸಿದರು. ಈ ಕೂಡಲೇ ಜಾರಿಗೆ ಬರುವಂತೆ ಕಾಯ್ದೆ ಅಡಿಯಲ್ಲಿ ಆನ್ ಲೈನ್ ಹರಾಜು ಸ್ಥಗಿತಗೊಳಿಸುವಂತೆ ಬ್ಯಾಂಕ್‌ಗಳಿಗೆ ಸೂಚಿಸಲು ಅಧಿಕಾರಿಗಳಿಗೆ ಆದೇಶಿಸಿದರು.

ಫೆಬ್ರವರಿ ತಿಂಗಳ 9, 10 ಹಾಗು 11ರಂದು ಕೆಜಿಎಫ್ ಅಧ್ಯಕ್ಷ ಹಳಸೆ ಶಿವಣ್ಣ ಅವರ ನೇತೃತ್ವದ ನಿಯೋಗ ನವದೆಹಲಿಯಲ್ಲಿ ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ, ಭೂಪೇಂದ್ರ ಯಾದವ್, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಸಂಸದರಾದ ಕೋಟಾ ಶ್ರೀನಿವಾಸಪೂಜಾರಿ, ಡಾ||ಸಿ.ಎನ್.ಮಂಜುನಾಥ್, ಸಚಿವಾಲಯದ ಉನ್ನತ ಅಧಿಕಾರಿಗಳನ್ನು ಭೇಟಿ ಮಾಡಿ ಬೆಳೆಗಾರರ ಸಮಸ್ಯೆಗಳ ಕುರಿತು ಗಮನ ಸೆಳೆದಿದ್ದಾರೆ. ನಿಯೋಗದಲ್ಲಿ ಕೆಜಿಎಫ್ ಉಪಾಧ್ಯಕ್ಷ ಕೆ.ಕೆ.ವಿಶ್ವನಾಥ್, ಚಿಕ್ಕಮಗಳೂರು ಜಿಲ್ಲಾ ಅಧ್ಯಕ್ಷ ಕೆ.ಯು.ರತೀಶ್, ಹೆಚ್‌ಡಿಪಿಎ ಖಜಾಂಚಿ ಎಂ. ಜೆ.ಸಚಿನ್, ಮೂಡಿಗೆರೆ ತಾಲ್ಲೂಕು ಗೌರವ ಕಾರ್ಯದರ್ಶಿ ಕೆ.ಡಿ.ಮನೋಹರ್ ಇದ್ದರು.

ಫೆ.16 ರಂದು ರೈಲು ಸಂಚಾರ ವ್ಯತ್ಯಯ

ಎತ್ತಿನಹೊಳೆ ಯೋಜನೆ ಕಾಲುವೆ ಕ್ರಾಸಿಂಗ್ ಕಾಮಗಾರಿ ಹಿನ್ನಲೆ

• ಪ್ರಜೋದಯ ವರದಿ

ಹಾಸನ: ಹಬ್ಬನಘಟ್ಟ-ಅರಸೀಕೆರೆ ನಿಲ್ದಾಣಗಳ ಮಧ್ಯೆ ವಿಶ್ವೇಶ್ವರಯ್ಯ ಜಲ ನಿಗಮದ ವತಿಯಿಂದ ಎತ್ತಿನ ಹೊಳೆ ಯೋಜನೆ ಕಾಲುವೆ ಕ್ರಾಸಿಂಗ್ ಕಾಮಗಾರಿ ನಡೆಯುತ್ತಿರುವ ಹಿನ್ನಲೆ ಫೆ.16 ರಂದು ಕೆಲ ರೈಲುಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಗಲಿದೆ.

ಹಲವು ರೈಲುಗಳು ರದ್ದಾಗಲಿದ್ದರೆ, ಕೆಲವು ಭಾಗಶಃ ರದ್ದುಗೊಳಿಸಲಾಗಿದೆ. ಇನ್ನು ಕೆಲ ರೈಲುಗಳ ಸಂಚಾರ ಸಮಯ ಮರು ನಿಗದಿಗೊಳ್ಳಲಿದ್ದರೆ, ಮತ್ತೆ ಕೆಲವು ರೈಲುಗಳನ್ನು ನಿಯಂತ್ರಿಸಲಾಗುವುದೆಂದು ರೈಲ್ವೆ ಇಲಾಖೆ ತಿಳಿಸಿದೆ.

ಸಂಚಾರ ರದ್ದುಗೊಂಡ ರೈಲುಗಳು

ರೈಲು ಸಂಖ್ಯೆ 56267 ಅರಸೀಕೆರೆ-ಮೈಸೂರು ಪ್ಯಾಸೆಂಜರ್, ರೈಲು ಸಂಖ್ಯೆ 16206 ಮೈಸೂರು-ತಾಳಗುಪ್ಪ ಎಕ್ಸ್‌ಪ್ರೆಸ್ ಹಾಗು ರೈಲು ಸಂಖ್ಯೆ 16205 ತಾಳಗುಪ್ಪ-ಮೈಸೂರು ಎಕ್ಸ್‌ಪ್ರೆಸ್ ರೈಲು ಸಂಚಾರವನ್ನು ರದ್ದುಗೊಳಿಸಲಾಗಿದೆ.

ಇನ್ನು ರೈಲು ಸಂಖ್ಯೆ 16225 ಮೈಸೂರು-ಶಿವಮೊಗ್ಗಾ ಟೌನ್ ಎಕ್ಸ್‌ಪ್ರೆಸ್, ಮೈಸೂರು-ಅರಸೀಕೆರೆ ನಡುವಿನ ಸಂಚಾರವನ್ನು ಭಾಗಶಃ ರದ್ದು ಪಡಿಸಲಾಗಿದೆ. ಅರಸೀಕೆರೆಯಿಂದ ತನ್ನ ನಿಗದಿತ ವೇಳೆಗೆ ಪ್ರಯಾಣ

ಆರಂಭಿಸಲಿದೆ. ರೈಲು ಸಂಖ್ಯೆ 56266 ಮೈಸೂರು-ಅರಸೀಕೆರೆ ಪ್ಯಾಸೆಂಜರ್ ರೈಲು 1 ಗಂಟೆ 50 ನಿಮಿಷಗಳ ಕಾಲ ಮತ್ತು ರೈಲು ಸಂಖ್ಯೆ 16221 ತಾಳಗುಪ್ಪ-ಮೈಸೂರು ಎಕ್ಸ್‌ಪ್ರೆಸ್ ರೈಲನ್ನು 1 ಗಂಟೆ 40 ನಿಮಿಷಗಳ ಕಾಲ ಮಾರ್ಗ ಮಧ್ಯೆ ನಿಯಂತ್ರಿಸಲಾಗುತ್ತದೆ.

ವಿಳಂಬಗೊಂಡ ರೈಲುಗಳು

ರೈಲು ಸಂಖ್ಯೆ 56265 ಅರಸೀಕೆರೆ-ಮೈಸೂರು ಪ್ಯಾಸೆಂಜರ್ ರೈಲು ಅರಸೀಕೆರೆಯಿಂದ 1 ಗಂಟೆ 40 ನಿಮಿಷಗಳ ವಿಳಂಬದೊಂದಿಗೆ ಮತ್ತು ರೈಲು ಸಂಖ್ಯೆ 06269 ಮೈಸೂರು-ಎಸ್ಎಂವಿಟಿ ಬೆಂಗಳೂರು ಪ್ಯಾಸೆಂಜರ್ ವಿಶೇಷ ರೈಲು ಮೈಸೂರಿನಿಂದ 1 ಗಂಟೆ 40 ನಿಮಿಷಗಳ ವಿಳಂಬದೊಂದಿಗೆ ಸಂಚಾರ ನಡೆಸಲಿದೆ ಎಂದು ರೈಲ್ವೆ ಇಲಾಖೆ ಮಾಹಿತಿ ನೀಡಿದೆ.

ಎಂಟಿಇಎಸ್: ಅವಿಶ್ವಾಸ ಪರ 14, ವಿರುದ್ಧ 10 ನಿರ್ದೇಶಕರು

ಫೆ.16ರಂದು ಹೈಕೋರ್ಟ್‌ಗೆ ಸಭೆಯ ವರದಿ ಸಲ್ಲಿಕೆ : ಅಂತಿಮ ತೀರ್ಪಿನತ್ತ ಎಲ್ಲರ ಚಿತ್ತ

• ಪ್ರಜೋದಯ ವರದಿ

ಹಾಸನ: ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಆಡಳಿತ ಮಂಡಳಿ ಅಧಿಕಾರಕ್ಕಾಗಿ ಹೈಕೋರ್ಟ್ ನಿರ್ದೇಶನದಂತೆ ಗುರುವಾರ ನಡೆದ ಅವಿಶ್ವಾಸ ಮಂಡನಾ ಸಭೆಯಲ್ಲಿ 24 ನಿರ್ದೇಶಕರ ಪೈಕಿ ಅವಿಶ್ವಾಸ ಪರವಾಗಿ ಅಶೋಕ್ ಹಾರನಹಳ್ಳಿ ಅವರನ್ನೊಳಗೊಂಡ 14 ಸದಸ್ಯರು, ವಿರೋಧವಾಗಿ 10 ಸದಸ್ಯರು ಕೈಎತ್ತುವ ಮೂಲಕ ಮತ ಚಲಾಯಿಸಿದರು.

ಹೈ ಕೋರ್ಟ್ ವೀಕ್ಷಕರನ್ನಾಗಿ ನೇಮಕ ಮಾಡಿದ್ದ ಹಿರಿಯ ವಕೀಲ ಉಮಾಶಂಕರ್ ಅವರ ಸಮ್ಮುಖದಲ್ಲೇ ಅವಿಶ್ವಾಸ ಮಂಡನೆ ಪ್ರಕ್ರಿಯೆ ನಡೆಯಿತು. ಸದಸ್ಯರ ಅಭಿಪ್ರಾಯ, ಸಭೆಯ ವಿಡಿಯೋ, ಸಹಿ ಹಾಗು ಕ್ರಿಯಾತ್ಮಕ ವರದಿಗಳನ್ನು ಸಂಗ್ರಹಿಸಿಕೊಂಡ ವೀಕ್ಷಕರು ಫೆ.16ರಂದು ಹೈಕೋರ್ಟ್‌ಗೆ ಸಲ್ಲಿಸಲಿದ್ದಾರೆ. ಆ ನಂತರ ಅಂತಿಮ ತೀರ್ಪು ಹೊರ ಬರುವ ನಿರೀಕ್ಷೆ ಇದೆ.

ಗುರುವಾರ ಮಧ್ಯಾಹ್ನ 12 ಗಂಟೆಗೆ ಪ್ರಾರಂಭವಾದ ಸಭೆಯಲ್ಲಿ ಮೊದಲು ಸಂಪೂರ್ಣ ಪ್ರಕ್ರಿಯೆಯ ವಿಡಿಯೋ ಚಿತ್ರೀಕರಣ ಮಾಡಲಾಯಿತು. ಬಳಿಕ ಅವಿಶ್ವಾಸ ನಿರ್ಣಯದ ವಿರುದ್ಧ ಹಾಲಿ ಅಧ್ಯಕ್ಷ ಆರ್.ಟಿ.ದ್ಯಾವೇಗೌಡ, ಕಾರ್ಯದರ್ಶಿ ಚೌಡುವಳ್ಳಿ ಜಗದೀಶ್ ಅವರ ಪರವಾಗಿ 10 ಸದಸ್ಯರು ಕೈಎತ್ತಿ ಬೆಂಬಲ ಸೂಚಿಸಿದರು. ನಂತರ ಅವಿಶ್ವಾಸ ಪರವಾಗಿ ಮಾಜಿ ಅಧ್ಯಕ್ಷ ಅಶೋಕ್ ಹಾರನಹಳ್ಳಿ, ಬಿ.ಆರ್.ಗುರುದೇವ್ ಅವರನ್ನು ಒಳಗೊಂಡ 14 ನಿರ್ದೇಶಕರು ಕೈಎತ್ತಿ ತಮ್ಮ ಅಭಿಪ್ರಾಯ ದಾಖಲಿಸಿದರು.

" ನನ್ನ ಅವಧಿಯಲ್ಲಿ ಯಾವುದೇ ಅವ್ಯವಹಾರ ನಡೆದಿರುವುದನ್ನು ಸಾಬೀತು ಪಡಿಸಿದರೆ ನಿರ್ದೇಶಕ ಸ್ಥಾನಕ್ಕೆ ರಾಜೀನಾಮೆ ನೀಡಲು ಸಿದ್ದ. ಜಾತಿ ಆಧಾರದಲ್ಲಿ ಸಂಸ್ಥೆ ನಡೆಸಿಲ್ಲ. ನಾನೇ ಹತೋಟಿಯಲ್ಲಿ ಇಟ್ಟುಕೊಂಡಿದ್ದೇನೆ ಎನ್ನಬಾರದೆಂಬ ಕಾರಣಕ್ಕೆ ಬಿ.ಆರ್.ಗುರುದೇವ್ ಅವರನ್ನು ಅಧ್ಯಕ್ಷರನ್ನಾಗಿ ಮಾಡುವ ನಿರ್ಧಾರ ಕೈಗೊಳ್ಳಲಾಗಿದೆ.

-ಅಶೋಕ್ ಹಾರನಹಳ್ಳಿ, ಸಂಸ್ಥೆ ಮಾಜಿ ಅಧ್ಯಕ್ಷ.

ಅವಿಶ್ವಾಸದ ಪರ 14 ನಿರ್ದೇಶಕರು

ಸಭೆ ಬಳಿಕ ಅಶೋಕ್ ಹಾರನಹಳ್ಳಿ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಅವಿಶ್ವಾಸ ಮಂಡನೆ ಸಭೆ ಸೌಹಾರ್ದಯುತವಾಗಿ ನಡೆಯಿತು. 24 ಸದಸ್ಯರಲ್ಲಿ 10 ಸದಸ್ಯರು ಅವಿಶ್ವಾಸ ನಿರ್ಣಯದ ವಿರುದ್ಧ, 14 ಸದಸ್ಯರು ಅವಿಶ್ವಾಸದ ಪರವಾಗಿ ಮತ ಚಲಾಯಿಸಿದ್ದಾರೆ. ಹೈಕೋರ್ಟ್ ನೇಮಕ ಮಾಡಿದ್ದ ವೀಕ್ಷಕರು ವರದಿಯನ್ನು ನ್ಯಾಯಾಲಯದ ಮುಂದೆ ಮಂಡಿಸಲಿದ್ದಾರೆ. ಕೋರ್ಟ್ ಅಂತಿಮ ನಿರ್ಧಾರ ಪ್ರಕಟ ಮಾಡಲಿದೆ ಎಂದು ಹೇಳಿದರು.

ನಮ್ಮ ಸಂಸ್ಥೆ ಬೈಲಾ ಪ್ರಕಾರ ಕಾರ್ಯಕಾರಿ ಸಮಿತಿ ಸಭೆಯೇ ಅಂತಿಮ. ಆ ಪ್ರಕಾರ ಬಹುಮತ ಇರುವವರು ಆಡಳಿತ ಮಾಡಬೇಕೆಂಬುದು ತೀರ್ಮಾನ. ಸಂಖ್ಯಾಬಲ ಕಡಿಮೆ ಇರುವವರಿಗೆ ಆಡಳಿತ ನಡೆಸಲು ಬಿಟ್ಟರೇ, ಇನ್ನೂ ಹೆಚ್ಚಿನ ಸಮಸ್ಯೆಯಾಗುತ್ತದೆ. ಈ ಬಗ್ಗೆ ನ್ಯಾಯಾಲಯದಲ್ಲಿ ವಾದ ಮಂಡನೆ ಮಾಡುತ್ತೇವೆ. ನಮ್ಮ ಸಂಸ್ಥೆಯ ಬೈಲಾ ಪ್ರಕಾರ

ನ್ಯಾಯ ಸಿಗದಿದ್ದರೆ ಸುಪ್ರೀಂ ಮೊರೆ

ಹಾಸನ: ಹೈಕೋರ್ಟ್‌ನಲ್ಲಿ ನ್ಯಾಯ ಸಿಗದಿದ್ದರೆ ಸುಪ್ರೀಂ ಕೋರ್ಟ್‌ಗೆ ಹೋಗಲು ಅವಕಾಶವಿದೆ. ಅಲ್ಲಿ ಚರಿತ್ರೆಯಾಗಿ ಉಳಿಯುವಂತಹ ನಿರ್ಣಯವನ್ನು ತೆಗೆದುಕೊಂಡು ಬರುತ್ತೇವೆಂದು ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಆಡಳಿತ ಮಂಡಳಿ ಕಾರ್ಯದರ್ಶಿ ಜಗದೀಶ್ ಚೌಡುವಳ್ಳಿ ಅವರು ಹೇಳಿದರು.

ಅವಿಶ್ವಾಸ ನಿರ್ಣಯ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2/3 ಬಹುಮತ ಅವಿಶ್ವಾಸ ಮಂಡನೆ ಮಾಡಬೇಕೆಂದು ಹೈಕೋರ್ಟ್ ಹೇಳಿತ್ತು. ಸಂಸ್ಥೆಯಲ್ಲಿ ಒಟ್ಟು 24 ನಿರ್ದೇಶಕರಿದ್ದು, ನಮ್ಮ ವಿರುದ್ಧ ಅವಿಶ್ವಾಸ ಸಾಬೀತು ಪಡಿಸಲು ಅವರಿಗೆ 16 ನಿರ್ದೇಶಕರ ಬೆಂಬಲ ಬೇಕು. ನಮಗೆ 9 ನಿರ್ದೇಶಕರ ಬೆಂಬಲ ಬೇಕು. ಆದರೆ, ಅವರ ಪರ 14 ಮತ್ತು ನಮ್ಮ ಪರ 10 ಮಂದಿ ನಿರ್ದೇಶಕರು ಸಂಖ್ಯಾಬಲ ಸಾಬೀತು ಮಾಡಿದ್ದೇವೆ. ನಾವು ಅಧಿಕಾರ ಉಳಿಸಿಕೊಳ್ಳಲು ಅಗತ್ಯವಿರುವ ಬೆಂಬಲ ಪಡೆದಿದ್ದೇವೆಂದರು.

ಹೈಕೋರ್ಟ್ ವೀಕ್ಷಕರು ಸಭೆಯ ಸಂಪೂರ್ಣ ವರದಿಯನ್ನು ಫೆ.16 ರಂದು ನ್ಯಾಯಾಲಯಕ್ಕೆ ಸಲ್ಲಿಸಲಿದ್ದಾರೆ. ಬಳಿಕ ವಾದ-ಪ್ರತಿವಾದ ಆಲಿಸಿ ನ್ಯಾಯಾಲಯ ತೀರ್ಪು ನೀಡಲಿದೆ. ನಮಗೆ ನ್ಯಾಯ ಸಿಗಲಿದೆ, ನಮ್ಮ ಬಣವೇ ಅಧಿಕಾರದಲ್ಲಿ ಮುಂದುವರೆಯುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

2/3 ಬಹುಮತ ಬೇಕಾಗಿಲ್ಲ, ಅದರಂತೆ ನಾವು ಅವಿಶ್ವಾಸ ಮಂಡಿಸುವಲ್ಲಿ ಯಶಸ್ವಿಯಾಗಿದ್ದು, ನ್ಯಾಯಾಲಯದಲ್ಲಿ ನಮ್ಮ ಪರವಾದ ತೀರ್ಪು ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಮ್ಮ ಸಂಸ್ಥೆಯಲ್ಲಿ ಈ ರೀತಿಯ ಬೆಳವಣಿಗೆ ಯಾವ ಸಂದರ್ಭದಲ್ಲೂ ಆಗಿರಲಿಲ್ಲ. ಇದು ಬೇಸರದ ಸಂಗತಿ. ಪ್ರವಾಸಕ್ಕೆ ಕರೆದುಕೊಂಡು ಹೋಗುವುದು, ಧರ್ಮಸ್ಥಳಕ್ಕೆ ಕರೆದುಕೊಂಡು ಹೋಗಿ ಪ್ರಮಾಣ ಮಾಡಿಸುವುದು ಯಾವಾಗಲೂ ನಡೆದಿರಲಿಲ್ಲ. ಈ ಸಂಸ್ಥೆ ಸ್ಥಾಪನೆಗೆ ದೊಡ್ಡ ದೊಡ್ಡ ವ್ಯಕ್ತಿಗಳು ಕಷ್ಟಪಟ್ಟಿದ್ದಾರೆ. ಈ ಬೆಳವಣಿಗೆ ನಡೆಯಬಾರದಿತ್ತು ಎಂದರು.

ಬೆಂಬಲ ಬೆಲೆಯಲ್ಲಿ ರಾಗಿ-ಭತ್ತ ಖರೀದಿಗೆ ಚಾಲನೆ

ಕ್ವಿಂಟಾಲ್ ರಾಗಿಗೆ 4,886ರೂ., ಭತ್ತಕ್ಕೆ 2,389ರೂ. ನಿಗದಿ

• ಪ್ರಜೋದಯ ವರದಿ

ಹಾಸನ: ಕ್ವಿಂಟಾಲ್ ರಾಗಿಗೆ 4,886 ರೂ. ಹಾಗು ಪ್ರತಿ ಕ್ವಿಂಟಾಲ್ ಭತ್ತಕ್ಕೆ 2,389ರೂ. ಬೆಂಬಲ ಬೆಲೆ ನಿಗದಿ ಪಡಿಸಲಾಗಿದೆ. ತಾಲ್ಲೂಕಿನಲ್ಲಿ ಈಗಾಗಲೇ 1,225 ರೈತರು ನೋಂದಣಿ ಮಾಡಿಕೊಂಡಿದ್ದು, 32,661 ಕ್ವಿಂಟಾಲ್ ರಾಗಿ ಖರೀದಿ ಸಲು ಗುರಿ ಹೊಂದಲಾಗಿದೆ ಎಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ತಿಳಿಸಿದರು.

ನಗರದ ಎಪಿಎಂಸಿ ಪ್ರಾಂಗಣದಲ್ಲಿ ರಾಗಿ ಮತ್ತು ಭತ್ತ ಖರೀದಿ ಕೇಂದ್ರಕ್ಕೆ ಗುರುವಾರ ಚಾಲನೆ ನೀಡಿ ಮಾತನಾಡಿದ ಅವರು, ರಾಜ್ಯ ಸರ್ಕಾರ ರಾಗಿ ಮತ್ತು ಭತ್ತಕ್ಕೆ ಕನಿಷ್ಠ ಬೆಂಬಲ

ಬೆಲೆ ನಿಗದಿಪಡಿಸಿ ರೈತರಿಂದ ನೇರ ಖರೀದಿ ಮಾಡುವ ಉತ್ತಮ ಕಾರ್ಯಕ್ರಮ ಜಾರಿಗೊಳಿಸಿದೆ. ಈ ಯೋಜನೆಯಿಂದ ರೈತರಿಗೆ ಹೆಚ್ಚಿನ ಅನುಕೂಲವಾಗಲಿದ್ದು, ಈ ಕುರಿತು ಹೆಚ್ಚಿನ ಮಾಹಿತಿ ಗ್ರಾಮ ಮಟ್ಟದಲ್ಲಿ ತಲುಪಿಸುವ ಅಗತ್ಯವಿದೆ ಎಂದು ಹೇಳಿದರು.

ಆಹಾರ ಇಲಾಖೆ ಈ ಧಾನ್ಯ ಖರೀದಿ ಮಾಡಿ ಸರ್ಕಾರದ ಅನ್ನ ಭಾಗ್ಯ ಯೋಜನೆ ಮೂಲಕ ಸಾರ್ವಜನಿಕರಿಗೆ ವಿತರಣೆ ಮಾಡಲಿದೆ. ರಾಗಿ ಗುಣಮಟ್ಟ ಅತ್ಯವಶ್ಯಕವಾಗಿರುವುದರಿಂದ ರೈತರು ಸ್ವಚ್ಛಗೊಳಿಸಿದ ಧಾನ್ಯವನ್ನು ಮಾತ್ರ ಖರೀದಿ ಕೇಂದ್ರಗಳಿಗೆ ತರಬೇಕು. ಒಂದು ಎಕರೆಗೆ 10 ಕ್ವಿಂಟಾಲ್ ಹಾಗು ಗರಿಷ್ಠ

» ನಾಲ್ಕನೇ ಪುಟದಲ್ಲಿ

ಟ್ರ್ಯಾಪ್ ಪ್ರಕರಣ: ಒಬ್ಬರಿಗೆ ಶಿಕ್ಷೆ ಮತ್ತೊಬ್ಬರು ಖುಲಾಸೆ

ಹಾಸನ: ಲೋಕಾಯುಕ್ತ ಬಲೆಗೆ ಬಿದ್ದಿದ್ದ ಚನ್ನರಾಯಪಟ್ಟಣ ಸಮಾಜ ಕಲ್ಯಾಣ ಇಲಾಖೆ ಕಚೇರಿ ಅಧೀಕ್ಷಕ ಹಾಗು ಮತ್ತೊಬ್ಬ ನೌಕರನ ವಿರುದ್ಧ ದಾಖಲಾಗಿದ್ದ ಪ್ರಕರಣ ಸಂಬಂಧ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯ ತೀರ್ಪು ಪ್ರಕಟಿಸಿದ್ದು, ಅಧೀಕ್ಷಕನಿಗೆ 6 ತಿಂಗಳು ಕಾರಾಗೃಹ ಶಿಕ್ಷೆ, 25 ಸಾವಿರ ರೂ. ದಂಡ ವಿಧಿಸಿದೆ.

ಸಮಾಜ ಕಲ್ಯಾಣ ಇಲಾಖೆ ಕಚೇರಿ ಅಧೀಕ್ಷಕ ಗೋವಿಂದರಾಜು ಹಾಗು ಕುಮಾರೇಗೌಡ 2011 ರಲ್ಲಿ ಲಂಚ ಸ್ವೀಕರಿಸುವಾಗ ಲೋಕಾಯುಕ್ತ ಬಲೆಗೆ ಬಿದ್ದಿದ್ದರು. ತನಿಖಾಧಿಕಾರಿಗಳು ಜಿಲ್ಲಾ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಪ್ರಕರಣ ವಿಚಾರಣೆ ನಡೆಸಿದ ನ್ಯಾಯಾಧೀಶರು ಗೋವಿಂದರಾಜು ವಿರುದ್ಧ ಆರೋಪ ಸಾಬೀತಾಗಿದೆ ಎಂದು ಆದೇಶ ನೀಡಿದರು. ಲೋಕಾಯುಕ್ತ ಪರವಾಗಿ ಪರವಾಗಿ ಪರಶುರಾಮ್ ವಾದ ಮಂಡಿಸಿದ್ದರು.

ಪ್ರೀತಮ್ ಗೌಡರನ್ನು ಕಾಂಗ್ರೆಸ್‌ಗೆ ಕಳುಹಿಸಲು ಜೆಡಿಎಸ್ ಪ್ರಯತ್ನ

• ಪ್ರಜೋದಯ ವರದಿ

ಹಾಸನ: ಜಿಲ್ಲಾ ರಾಜಕಾರಣದಲ್ಲಿ ಮತ್ತೊಬ್ಬ ಒಕ್ಕಲಿಗ ನಾಯಕ ಬೆಳೆಯುತ್ತಾರೆಂದು ಮಾಜಿ ಶಾಸಕ ಪ್ರೀತಮ್ ಜೆ. ಗೌಡ ಅವರನ್ನು ಕಾಂಗ್ರೆಸ್‌ಗೆ ಕಳುಹಿಸಿಕೊಡಲು ಜೆಡಿಎಸ್‌ನವರು ಪ್ರಯತ್ನಿಸುತ್ತಿದ್ದಾರೆಂದು ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ನಾರಾಯಣಗೌಡ ಅವರು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಜೆಡಿಎಸ್ ಜೊತೆಗೆ ಹೊಂದಾಣಿಕೆ ಬೇಡವೆಂಬ ಕಾರ್ಯಕರ್ತರ ಅಭಿಪ್ರಾಯವನ್ನು ಪ್ರೀತಮ್ ಗೌಡ ಬಹಿರಂಗವಾಗಿ ಹೇಳಿದ್ದಾರೆ. ಅದನ್ನೇ ದೊಡ್ಡದಾಗಿ ಬಿಂಬಿಸುತ್ತಿರುವುದು ಏಕೆ, ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಮೈತ್ರಿ ಕುರಿತು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರೇ ಅಪಸ್ವರ ಎತ್ತಿದ್ದಾರೆ. ಅವರ ಹೇಳಿಕೆಗೆ ವಿರೋಧ ವ್ಯಕ್ತಪಡಿಸದ ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಸ್.ಲಿಂಗೇಶ್ ಅವರು ಪ್ರೀತಮ್ ಮಾತಿಗೆ ಸಹನೆ ಕಳೆದು ಕೊಳ್ಳುತ್ತಿರುವುದೇಕೆ. ಹಾಸನದಲ್ಲಿ ಬಿಜೆಪಿ ಎದುರಾಳಿ ಪಕ್ಷ ಜೆಡಿಎಸ್. ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸ ಬೇಕೆಂಬುದು ಬಿಜೆಪಿ ಕಾರ್ಯಕರ್ತರ ಆಸೆ. ಮೈತ್ರಿ ಮಾಡಿಕೊಂಡರೆ ಇಷ್ಟು ವರ್ಷಗಳ ಕಾಲ ಪಕ್ಷಕ್ಕಾಗಿ ದುಡಿದವರಿಗೆ ಅನ್ಯಾಯ ಆಗುತ್ತದೆ. ಹೀಗಾಗಿ ಮೈತ್ರಿ ಕುರಿತು ಎಲ್ಲರಿಗೂ ಅಸಮಾಧಾನವಿದೆ ಎಂದರು.

(ನಾಲ್ಕನೇ ಪುಟದಲ್ಲಿ)

ಶಸ್ತ್ರ ಚಿಕಿತ್ಸೆ ವೇಳೆ ವೈದ್ಯರ ನಿರ್ಲಕ್ಷ್ಯ : ಕ್ರಮಕ್ಕೆ ಒತ್ತಾಯ

• ಪ್ರಜೋದಯ ವರದಿ

ಹಾಸನ: ಅಪೆಂಡಿಕ್ ಶಸ್ತ್ರಚಿಕಿತ್ಸೆಯನ್ನು ಸರಿಯಾಗಿ ಮಾಡದೆ ಹಿಮ್ಸ್ ವೈದ್ಯರು ನನ್ನ ಮಗಳ ಜೀವದೊಂದಿಗೆ ಚೆಲ್ಲಾಟವಾಡಿದ್ದಾರೆಂದು ಅರಕಲಗೂಡು ತಾಲ್ಲೂಕು ವಿಜಾಪುರ ಫಾರೆಸ್ಟ್ ಗ್ರಾಮದ ಪೂರ್ಣಿಮಾ ಅವರು ಕಣ್ಣೀರು ಹಾಕಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 16 ವರ್ಷದ ಇಂದುಶ್ರೀಗೆ 2025ರ ಡಿ.30 ರಂದು ಅಪೆಂಡಿಕ್ಸ್ ಶಸ್ತ್ರ ಚಿಕಿತ್ಸೆ ಮಾಡಲಾಗಿದೆ. ಮಾರನೇ ದಿನದಿಂದಲೇ ವಿಪರೀತ ಕೀವು ಬಂದಿದ್ದರಿಂದ ವೈದ್ಯರನ್ನು ಕೇಳಿದಾಗ ಏನೂ ಆಗುವುದಿಲ್ಲ, ಧೈರ್ಯವಾಗಿರಿ ಎಂದು ನಮ್ಮನ್ನು ಸುಮ್ಮನಿರಿಸಿದರು. ವೈದ್ಯರಾದ ಡಾ|| ಜಿ.ಡಿ.ಈಶ್ವರ್ ಪ್ರಸಾದ್ ಅವರ ತಂಡ ನಿರ್ಲಕ್ಷ್ಯದಿಂದ ಶಸ್ತ್ರ ಚಿಕಿತ್ಸೆ ಮಾಡಿದ್ದೇ ಅವಾಂತರಕ್ಕೆ ಕಾರಣ. ಆರೋಗ್ಯದಲ್ಲಿ ಏರುಪೇರು ಉಂಟಾದ ಹಿನ್ನಲೆಯಲ್ಲಿ ಜ.5ರ ವರೆಗೆ ಒಳರೋಗಿಯಾಗಿ ದಾಖಲಿಸಿಕೊಂಡಿದ್ದರು. ನಂತರ ಅರಕಲಗೂಡು ಆಸ್ಪತ್ರೆಗೆ ಕಳುಹಿಸಿಕೊಟ್ಟರು. ಶಸ್ತ್ರ ಚಿಕಿತ್ಸೆಯಾದ ಜಾಗದಲ್ಲಿ ಕೀವು ಚಿಮ್ಮುತ್ತಿದ್ದಂತೆ ಗಾಬರಿಯಾದ ನಾವು ಮೈಸೂರಿನ ಜೆಎಸ್ಎಸ್ ಆಸ್ಪತ್ರೆಗೆ ದಾಖಲಿಸಬೇಕಾಯಿತು. ಅಲ್ಲಿನ ವೈದ್ಯರು ಶಸ್ತ್ರ ಚಿಕಿತ್ಸೆಯಲ್ಲಿನ ಎಡವಟ್ಟು ಸಮಸ್ಯೆಗೆ ಕಾರಣವೆಂದಿದ್ದಾರೆ ಎಂದರು.

ಮೈಸೂರು ಆಸ್ಪತ್ರೆಯಲ್ಲಿ ಸೂಕ್ತ ಚಿಕಿತ್ಸೆ ನೀಡಿದ್ದರಿಂದ ಮಗಳು ಪ್ರಾಣಾಪಾಯದಿಂದ ಪಾರಾಗಿದ್ದಾಳೆ. ಆದರೆ, ಹಿಮ್ಸ್ ವೈದ್ಯರು ತೋರಿದ ನಿರ್ಲಕ್ಷ್ಯಕ್ಕೆ ಮಗಳು ಸಾವು ಬದುಕಿನ ನಡುವೆ ಹಲವು ದಿನಗಳವರೆಗೆ ಹೋರಾಡಬೇಕಾಯಿತು. ಆರ್ಥಿಕವಾಗಿಯೂ ತೊಂದರೆ ಅನುಭವಿಸಬೇಕಾಯಿತು. ನಿರ್ಲಕ್ಷ್ಯ ವಹಿಸಿದ ವೈದ್ಯರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು. ಇಂದುಶ್ರೀ ಅವರ ತಂದೆ ಮಂಜಯ್ಯ, ಚಂದ್ರಣ್ಣ, ಜಗದೀಶ್ ಇತರರಿದ್ದರು.

ದೇವೇಗೌಡರು, ರೇವಣ್ಣ ಕೇಂದ್ರ ಕೃಷಿ ಸಚಿವರ ಭೇಟಿ: ಹೆಚ್ಚುವರಿಗೆ ಅನುದಾನಕ್ಕೆ ಮನವಿ

ಬಿತ್ತನೆ ಬೀಜ ಪರೀಕ್ಷಾ ಪ್ರಯೋಗಾಲಯ ನಿರ್ಮಾಣಕ್ಕೆ ಕೋರಿಕೆ

• ಪ್ರಜೋದಯ ವರದಿ

ಹಾಸನ: ಕಾರೆಕೆರೆ ಕೃಷಿ ಕಾಲೇಜು, ಬೆಂಗಳೂರು ಕೃಷಿ ವಿಜ್ಞಾನ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಹೆಚ್ಚುವರಿ ವಿದ್ಯಾರ್ಥಿ ನಿಲಯ ಹಾಗು ಬಿತ್ತನೆ ಬೀಜ ಪರೀಕ್ಷಾ ಪ್ರಯೋಗಾಲಯ ನಿರ್ಮಾಣಕ್ಕೆ ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವಂತೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು, ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಲ್ಲಿ ಮನವಿ ಮಾಡಿದರು.

ದೆಹಲಿಯಲ್ಲಿ ಕೇಂದ್ರ ಸಚಿವರನ್ನು ಭೇಟಿ ಮಾಡಿ, ಬೆಂಗಳೂರು ಮತ್ತು ಕಾರೆಕೆರೆ ಕೃಷಿ ಕಾಲೇಜುಗಳು, ಕೃಷಿ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣೆಗೆ ಮೀಸಲಾಗಿರುವ ಪ್ರಮುಖ

ಒಟ್ಟು 48.75 ಕೋ.ರೂ. ಶಿಫಾರಸ್ಸಿಗೆ ಮನವಿ

- ಬೆಂಗಳೂರು ಕೃಷಿ ವಿವಿಯಲ್ಲಿ ಪಿಜಿ ಮಹಿಳಾ ಹಾಸ್ಟೆಲ್‌ಗೆ 18.75 ಕೋ.ರೂ.
- ಕಾರೆಕೆರೆಯಲ್ಲಿ ಬೀಜ ಆರೋಗ್ಯ ಪರೀಕ್ಷಾ ಪ್ರಯೋಗಾಲಯಕ್ಕೆ 10 ಕೋ. ರೂ.
- ಯುಜಿ ಬಾಲಕ-ಹುಡುಗಿಯರ ಹಾಸ್ಟೆಲ್ ನಿರ್ಮಾಣಕ್ಕೆ 20 ಕೋ.ರೂ.
- ಒಟ್ಟು 48.75 ಕೋ. ರೂ. ಬಿಡುಗಡೆಗೆ ಶಿಫಾರಸ್ಸು ಮಾಡುವಂತೆ ಮನವಿ

ಸಂಸ್ಥೆಗಳಾಗಿವೆ. ಕಳೆದ ಹಲವು ದಶಕಗಳಿಂದ ಎರಡೂ ಸಂಸ್ಥೆಗಳು ಕೃಷಿ ಅಭಿವೃದ್ಧಿಯಲ್ಲಿ ಗಮನಾರ್ಹ ಕೊಡುಗೆ ನೀಡಿವೆ. ಬೆಂಗಳೂರು ವಿವಿಯು ಮಳೆಯಾಶ್ರಿತ ಹವಾಮಾನಕ್ಕೆ ಸೂಕ್ತವಾದ ಹಾಗು ಹೆಚ್ಚಿನ ಇಳುವರಿ ನೀಡುವ ಬೆಳೆಗಳನ್ನು ಅಭಿವೃದ್ಧಿ ಪಡಿಸಿದೆ ಎಂದು ಗಮನ ಸೆಳೆದರು.

ನೀರಾವರಿ, ಪರಿಸರ ವ್ಯವಸ್ಥೆಗಳು ಮತ್ತು ಹಲವಾರು ಪ್ರತಿಷ್ಠಿತ ರಾಷ್ಟ್ರೀಯ ಪ್ರಶಸ್ತಿ ಗಳಿಸಿದೆ. ಈ ಸಂಸ್ಥೆಗಳು 3,499 ಪದವಿ ಪೂರ್ವ ವಿದ್ಯಾರ್ಥಿಗಳು, 746 ಸ್ನಾತಕೋತ್ತರ ವಿದ್ಯಾರ್ಥಿಗಳು, ಮತ್ತು 279 ಡಾಕ್ಟರೇಟ್, ವಿದ್ವಾಂಸರು ಸೇರಿ ಒಟ್ಟು 4,524 ವಿದ್ಯಾರ್ಥಿಗಳ ಸಾಮರ್ಥ್ಯ ಹೊಂದಿವೆ. ಇತ್ತೀಚಿನ ವರ್ಷಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿಯಲ್ಲಿ ಹೆಚ್ಚಳ ಆಗುತ್ತಿದ್ದು, ಪ್ರಸ್ತುತ ಹಾಸ್ಟೆಲ್ ಮೂಲ ಸೌಕರ್ಯ ಅಗತ್ಯವಾಗಿದೆ. ಹಾಸ್ಟೆಲ್ ಸೌಕರ್ಯ ಇಲ್ಲದೆ ಅನೇಕ ವಿದ್ಯಾರ್ಥಿಗಳು ಅಲೆದಾಡುವಂತಾಗಿದೆ ಎಂದು ತಿಳಿಸಿದರು.

ಕ್ಯಾಂಪಸ್‌ನ ಹೊರಗಿನ ವಸತಿ, ಸಾಮಾನ್ಯವಾಗಿ ದುಬಾರಿ ಮತ್ತು ಅನನುಕೂಲವಾಗಿದೆ. ವಿದ್ಯಾರ್ಥಿಗಳ ಸುರಕ್ಷತೆ ಖಚಿತಪಡಿಸಿಕೊಳ್ಳಲು ಸಾಕಷ್ಟು ಹಾಸ್ಟೆಲ್ ಸೌಲಭ್ಯಗಳು ಅತ್ಯಗತ್ಯ. ಇದರಿಂದ ಅನುಕೂಲಕರ ಶೈಕ್ಷಣಿಕ ವಾತಾವರಣ ಸಿಗಲಿದೆ.

» ನಾಲ್ಕನೇ ಪುಟದಲ್ಲಿ

ಪಾದಯಾತ್ರೆ ಹೊರಟಿದ್ದ ವ್ಯಕ್ತಿಗೆ ಹೃದಯಾಘಾತ

ಬೇಲೂರು : ಧರ್ಮಸ್ಥಳಕ್ಕೆ ಪಾದಯಾತ್ರೆ ತೆರಳುತ್ತಿದ್ದ ಭಕ್ತರೊಬ್ಬ ಹೃದಯಾಘಾತದಿಂದ ಮಲಗಿದಲ್ಲಿಯೇ ಸಾವನ್ನಪ್ಪಿರುವ ಘಟನೆ ತಾಲ್ಲೂಕಿನ ಚೀಕನಹಳ್ಳಿ ಗ್ರಾಮದಲ್ಲಿ ಬುಧವಾರ ತಡರಾತ್ರಿ ನಡೆದಿದೆ. ಹಾಸನ ತಾಲ್ಲೂಕಿನ ಜಕ್ಕೇನಹಳ್ಳಿ ಗ್ರಾಮದ ಕೃಷ್ಣ (50) ಮೃಪಟ್ಟ ವ್ಯಕ್ತಿ.

ಕೃಷ್ಣ ಅವರು ಅಳಿಯ ದಿನೇಶ್‌ಗಾಗಿ ಚೀಕನಹಳ್ಳಿ ಗ್ರಾಮದ ಆಟೋ ನಿಲ್ದಾಣದಲ್ಲಿ ವಿಶ್ರಾಂತಿಗಾಗಿ ಮಲಗಿದ್ದರು. ಅಲ್ಲಿಗೆ ಬಂದ ದಿನೇಶ್, ಎಬ್ಬಿಸಲು ಹೋದಾಗ ಮಲಗಿದ ಸ್ಥಿತಿಯಲ್ಲೇ ಮೃತಪಟ್ಟಿರುವುದು ಗೊತ್ತಾಗಿದೆ. ತಾಲ್ಲೂಕು ಆಸ್ಪತ್ರೆಗೆ ಕರೆದೊಯ್ದರು. ಆದರೆ, ವೈದ್ಯರು ಪರಿಶೀಲನೆ ನಡೆಸಿ, ಹೃದಯಾತದಿಂದ ಮೃಪಟ್ಟಿರುವುದನ್ನು ದೃಢಪಡಿಸಿದರು.

E-mail : prajodayahsn@gmail.com

ಪ್ರಜೋದಯ

13 ಫೆಬ್ರವರಿ 2026 ಶುಕ್ರವಾರ

ಸಿನಿ ಪ್ರಜಾ

ಹೀರೊ ಆಗಿ ಚಿತ್ರರಂಗಕ್ಕೆ ಉಪೇಂದ್ರ ಮಗ ಎಂಟ್ರಿ

ಕಾಶ್ಮೀರದಲ್ಲಿ ಸಿನಿಮಾ ಚಿತ್ರೀಕರಣ

ಸ್ಟಾರ್ ನಟರ ಮಕ್ಕಳು, ಮೊಮ್ಮಕ್ಕಳು ಚಿತ್ರರಂಗ ಪ್ರವೇಶಿಸುವುದು ಹೊಸದೇನು ಅಲ್ಲ, ಇದೀಗ ನಟ, ನಿರ್ದೇಶಕ ರಿಯಲ್ ಸ್ಟಾರ್ ಉಪೇಂದ್ರ ಪುತ್ರ ಆಯುಷ್ ಹೀರೊ ಆಗಿ ಚಿತ್ರರಂಗಕ್ಕೆ ಬರ್ತಿದ್ದಾನೆ. ಉಪೇಂದ್ರ-ಪ್ರಿಯಾಂಕಾ ಉಪೇಂದ್ರ ಅವರ ಪುತ್ರಿ ಐಶ್ವರ್ಯಾ ಬಾಲನಟಿಯಾಗಿ ದೇವಕಿ ಎಂಬ ಚಿತ್ರದಲ್ಲಿ ನಟಿಸಿದ್ದಳು. ಈಗ ಪುತ್ರನ ಸರದಿ.



ಕಳೆದ ವರ್ಷ ಆಯುಷ್ ಹುಟ್ಟುಹಬ್ಬದ ಸಂಭ್ರಮದಲ್ಲಿ ಮಂತ್ರಾಲಯದಲ್ಲಿ ಚಿತ್ರದ ಸ್ಕ್ರಿಪ್ಟ್ ಪೂಜೆ ನಡೆದಿತ್ತು. ಇದೀಗ ಕಾಶ್ಮೀರದಲ್ಲಿ ಚಿತ್ರದ ಚಿತ್ರೀಕರಣ ನಡ್ತೀದೆ. ಮೊದಲಾಸಲ ಸಿನಿಮಾ ಖ್ಯಾತಿಯ ಪುರುಷೋತ್ತಮ ಸೂರಿ ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಹೀರ ಆಗಲು ಬೇಕಾದ ಎಲ್ಲಾ ತಯಾರಿ ಮಾಡಿಕೊಂಡೇ ಆಯುಷ್ ಬಣ್ಣ ಹಚ್ಚಿದ್ದಾನೆ. ಕಾಶ್ಮೀರದಲ್ಲೇ ಚಿತ್ರದ ಮುಹೂರ್ತ ನೆರವೇರಿದ್ದು, ಅಲ್ಲಿಯೇ 25 ದಿನಗಳ ಮೊದಲ ಹಂತದ ಚಿತ್ರೀಕರಣ ಕೂಡ ನಡೆದಿದೆ.

ಶ್ರೀಕಲ್ಪವೃಕ್ಷ ಮೂವೀ ಮೇಕರ್ಸ್ ಬ್ಯಾನರ್ ಅಡಿಯಲ್ಲಿ ಅಭಿಷೇಕ್ ಎನ್ ಸಿರಿವಂತ್ ಈ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಇನ್ನು ಹೆಸರಿಡದ ಚಿತ್ರವನ್ನು ಛಾಯಾಗ್ರಾಹಕ ಎಚ್ ಸಿ ವೇಣು ಸೆರೆ ಹಿಡಿಯುತ್ತಿದ್ದಾರೆ. ಮ್ಯಾಜಿಕಲ್ ಕಂಪೋಸರ್ ಅರ್ಜುನ್ ಜನ್ಯಾ ಹಾಡುಗಳಿಗೆ ಟ್ಯೂನ್ ಹಾಕುತ್ತಿದ್ದಾರೆ. ಮೇಕಿಂಗ್ ಹಂತದಲ್ಲೇ ಇದೊಂದು ರೊಮ್ಯಾಂಟಿಕ್ ಲವ್ ಸ್ಟೋರಿ ಎನ್ನುವುದು ಗೊತ್ತಾಗುತ್ತಿದೆ. ಶೀಘ್ರದಲ್ಲೇ ಚಿತ್ರದ ಟೈಟಲ್ ಹಾಗೂ ಇನ್ನುಳಿತ ತಾರಾಗಣದ ಮಾಹಿತಿ ಸಿಗಲಿದೆ.

ಕಾಶ್ಮೀರದಲ್ಲಿ ಸಿನಿಮಾ ಚಿತ್ರೀಕರಣ ಸೆಟ್‌ಗೆ ಉಪೇಂದ್ರ ಹಾಗೂ ಪತ್ನಿ ಪ್ರಿಯಾಂಕ ಭೇಟಿ ನೀಡಿದ್ದಾರೆ. ಮಗನಿಗೆ ಒಂದಷ್ಟು ಸಲಹೆಗಳನ್ನು ನೀಡಿದ್ದಾರೆ. ಕಾಶ್ಮೀರದ ಕೊರೆಯುವ ಚಳಿಯಲ್ಲಿ, ಹಿಮಚ್ಛಾದಿತ ಲೊಕೇಶನ್‌ಗಳನ್ನು ದೃಶ್ಯಗಳನ್ನು ಸೆರೆಹಿಡಿಯಲಾಗ್ತಿದೆ. ಹಾಡುಗಳನ್ನು ಕೂಡ ಅಲ್ಲೇ ಚಿತ್ರೀಕರಣ ಮಾಡಿದ್ದಾರೆ. ಚಿತ್ರದ ನಾಯಕಿ ಯಾರು? ಬೇರೆ ಯಾರೆಲ್ಲಾ ಚಿತ್ರದಲ್ಲಿ ನಟಿಸಿದ್ದಾರೆ ಎನ್ನುವ ಕುತೂಹಲ ಅಭಿಮಾನಿಗಳಲ್ಲಿದೆ.

ಆಯುಷ್ ಹಾಗೂ ಸಹೋದರಿ ಐಶ್ವರ್ಯಾ ಇಬ್ಬರೂ ಸಿನಿಮಾ ಮೇಕಿಂಗ್ ಬಗ್ಗೆ ಕಲಿಯುತ್ತಿದ್ದಾರೆ. ತಮ್ಮ ಮೊದಲ ಚಿತ್ರದ ಸ್ಕ್ರಿಪ್ಟ್ ವಿಚಾರದಲ್ಲಿ ಕೂಡ ಆಯುಷ್ ಹೆಚ್ಚಿನ ಕೇರ್ ತಗೊಂಡಿದ್ದಾರೆ. ಉಪೇಂದ್ರ ಹಾಗೂ ಪ್ರಿಯಾಂಕ ಚಿತ್ರದ ವಿಚಾರದಲ್ಲಿ ಯಾವುದೇ ಹಸ್ತಕ್ಷೇಪ ಮಾಡದೇ ಬೆಂಬಲವಾಗಿ ನಿಂತಿದ್ದಾರೆ.

ಉಪೇಂದ್ರ ಹಾಗೂ ಪ್ರಿಯಾಂಕ ದಶಕಗಳಿಂದ ಚಿತ್ರರಂಗದಲ್ಲಿ ಆಕ್ಟೀವ್ ಆಗಿದ್ದಾರೆ. ಮದುವೆ ನಂತರ ಕೂಡ ಪ್ರಿಯಾಂಕ ಒಂದಷ್ಟು ಸಿನಿಮಾಗಳಲ್ಲಿ ನಟಿಸಿದ್ದಾರೆ. ಮಹಿಳಾ ಪ್ರಧಾನ ಸಿನಿಮಾಗಳಲ್ಲಿ ಮಿಂಚಿದ್ದಾರೆ. ಮುಂದೆ ನಿರ್ದೇಶಕಿ ಆಗುವ ಕನಸು ಕಂಡಿದ್ದಾರೆ. ಸದ್ಯಕ್ಕೆ ಆಯುಷ್ ಸಿನಿ ಆರಂಗೇಟ್ರಂಗಾಗಿ ಇಡೀ ಕುಟುಂಬ ಕಾಯ್ತಿದೆ. ಅಪ್ಪನ ಹೆಸರು ಹೇಳಿಕೊಳ್ಳದೇ ಚಿತ್ರರಂಗದಲ್ಲಿ ಗುರ್ತಿಸಿಕೊಳ್ಳಲು ಇಷ್ಟಪಡುವುದಾಗಿ ಆಯುಷ್ ಕೆಲ ದಿನಗಳ ಹಿಂದೆ ಹೇಳಿದ್ದು ವೈರಲ್ ಆಗಿತ್ತು. ತಂದೆ ನಿರ್ದೇಶನದಲ್ಲೇ ಆಯುಷ್ ಚಿತ್ರರಂಗಕ್ಕೆ ಎಂಟ್ರಿ ಆಗ್ತಾನೆ ಎನ್ನುವ ಊಹಾಪೋಹ ಕೇಳಿಬಂದಿತ್ತು. ಆದರೆ ಅದು ಸುಳ್ಳಾಗಿದೆ.

ಅಪ್ಪನ ಜೊತೆ ಸಿನಿಮಾಗಳಲ್ಲಿ ನಟಿಸೋಕೆ ಕೆಲವರು ಸಲಹೆ ನೀಡುತ್ತಾರೆ. ಆದರೆ ಪ್ರತಿಭೆ ಇದ್ದವರು ಇಲ್ಲಿ ಉಳಿದುಕೊಳ್ಳುತ್ತಾರೆ. ನಾನು ಕಷ್ಟಪಟ್ಟು ಯಾರ ಬೆಂಬಲ ಇಲ್ಲದೇ ಚಿತ್ರರಂಗಕ್ಕೆ ಬರ್ತೀನಿ. ಸೊನ್ನೆಯಿಂದ ಶುರು ಮಾಡ್ತೀನಿ. ಕಾಲೇಜಿನಲ್ಲೇ ಕೆಲ ಶಾರ್ಟ್ ಫಿಲ್ಮ್ ಮಾಡ್ತಿದ್ದೀನಿ. ಅವಕಾಶ ಸಿಕ್ಕರೆ ಕಂಡಿತ ನನ್ನ ಶ್ರಮ ಹಾಕುತ್ತೇನೆ. ನಿರ್ದೇಶಕ ಆಗ್ತೀನೋ ಇಲ್ಲವೋ ಗೊತ್ತಿಲ್ಲ, ಬರವಣಿಗೆಯಲ್ಲಿ ಬಹಳ ಆಸಕ್ತಿ ಇದೆ ಎಂದು ಹೇಳಿದ್ದು ಸುದ್ದಿ ಆಗಿತ್ತು. ಇತ್ತೀಚೆಗೆ ಉಪೇಂದ್ರ ನಟನೆಯ 45 ಸಿನಿಮಾ ತೆರೆಗೆ ಬಂದಿತ್ತು. ಭಾರ್ಗವ ಹಾಗೂ ನೆಕ್ಸ್ಟ್ ಲೆವೆಲ್ ಚಿತ್ರಗಳಲ್ಲಿ ನಟಿಸ್ತಿದ್ದಾರೆ.

ಊಹೆಗೂ ನಿಲುಕದ.. ಭಾವನೆಗಳು ತುಂಬಿದ ಚಿತ್ರವೇ ಬಯಕೆಗಳು ಬೇರೂರಿದಾಗ

ಹೆಣ್ಣಿನ ಮನಸ್ಸಿನಲ್ಲಿ ಆಳವಾಗಿ ಬೇರೂರಿದ ಭಾವನೆಗಳನ್ನು ಅದ್ಭುತವಾಗಿ ತೆರೆ ಮೇಲೆ ತೋರಿಸುವುದು ಅಷ್ಟು ಸುಲಭವಲ್ಲ. ಆದರೆ ಆ ಕೆಲಸವನ್ನು ಇಲ್ಲಿ ಒಬ್ಬ ಮಹಿಳಾ ನಿರ್ದೇಶಕಿ ಮಾಡಿದ್ದಾರೆ. ಅವರೇ ಎನ್.ಜ್ಯೋತಿಲಕ್ಷ್ಮೀ. ಈ ವಾರ ರಿಲೀಸ್ ಆಗಿರುವಂತ ಬಯಕೆಗಳು ಬೇರೂರಿದಾಗ ಸಿನಿಮಾ ಎಲ್ಲರನ್ನು ಮೌನವಾಗಿಸುವಂತೆ ಮಾಡುತ್ತದೆ. ಈ ಸಿನಿಮಾ ಆರಂಭವಾಗುವ ರೀತಿನೇ ಬೇರೆ ಎಂಡ್ ಆಗುವ ರೀತಿಯೇ ಬೇರೆ. ಊಹೆಗೂ ನಿಲುಕದ ಕಥೆ ಈ ಸಿನಿಮಾದಲ್ಲಿದೆ.

ಇದು ಕಾದಂಬರಿಯಾಧಾರಿತ ಸಿನಿಮಾ. ತೀರಾ ಆಚೆ ಈಚೆ ಹೋಗದೆ ಒಂದು ಕುಟುಂಬದಲ್ಲಿ ಏನೆಲ್ಲಾ ನಡೆಯಬಹುದು ಅಷ್ಟು ಸೀಮಿತ ಪ್ರದೇಶದಲ್ಲಿ ಚಿತ್ರೀಕರಣ ಮಾಡಿದ್ದಾರೆ. ಇಲ್ಲಿ ಬಹಳ ಮುಖ್ಯವಾಗುವುದು ಭಾವನೆಗಳು ಮಾತ್ರ, ಅವಳಲ್ಲಿ ಕಾಣುವ ತೊಳಲಾಟಗಳು ಮಾತ್ರ. ಗಂಡನಿಂದ ಸಿಗದ ಬಯಸಿದ ಬದುಕನ್ನ ಇನ್ನೊಬ್ಬನಿಂದ ಕಂಡುಕೊಳ್ಳುತ್ತಾಳೆ. ಗಂಡನಿಗೆ ಆ ಸತ್ಯ ಗೊತ್ತಾದ ಮೇಲೆ ಒದ್ದಾಡಿ ಹೋಗುತ್ತಾಳೆ. ಸಂಸಾರ ಸಾಗಿಸುವುದಕ್ಕೆ ತೀರಾ ಕಷ್ಟಪಡುತ್ತಾಳೆ. ಇದು ನಾವೂ ನೋಡುವ ರೀತಿಯ ಸಿನಿಮಾ. ಆದರೆ ಕ್ಲೈಮ್ಯಾಕ್ಸ್‌ನಲ್ಲಿ ಆ ಯುವತಿಯ ಮೇಲೆ ನೋಡುಗರಿಗೆ ಮೂಡಿದ್ದ ಬೇಸರ, ಕೋಪ ಎಲ್ಲವನ್ನು ತಣ್ಣಗೆ ಮಾಡಿಬಿಡುತ್ತೆ. ತಪ್ಪಾಗಿ ತಿಳಿದಿದ್ದ ಭಾವನೆಯೂ ಅಳಿಸಿ ಹೋಗಿ ಬಿಡುತ್ತೆ. ಹಾಗಾದ್ರೆ ಅವಳು ಹಳಿ ತಪ್ಪಿದ್ಲಾ..? ಅವಳ ಜೀವನದಲ್ಲಿ ಬಂದವನು ಯಾರು..? ಇದೆಲ್ಲದಕ್ಕೂ ಭಾವನೆಗಳು ಬೇರೂರಿದಾಗ ಸಿನಿಮಾ ನೋಡಿ. ನಿಮ್ಮ ಮನಸ್ಸಿನಲ್ಲಿರುವ ದುಃಖವನ್ನು ಹೊರ ಹಾಕುವಂತೆ ಮಾಡಿಬಿಡುತ್ತದೆ.

ಆಕರ್ಷ್ ಆದಿತ್ಯಾ ಹಾಗೂ ಶರಣ್ಯ ತಮ್ಮ ಪಾತ್ರವನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ಶರಣ್ಯ ಅಂತು ತಮ್ಮ ಭಾವನೆಗಳಿಂದಾನೇ ನೋಡುಗರನ್ನ ಕಟ್ಟಿ ಹಾಕಿ ಬಿಡುತ್ತಾರೆ. ಎನ್ ಸುದರ್ಶನ್ ಈ ಸಿನಿಮಾಗೆ ಬಂಡವಾಳ ಹೂಡಿದ್ದಾರೆ.

ಕ್ರೈಸ್ತರ ದೇವದೂತ ಸಂತ ಮಿಕಯೇಲ್‌ಗೆ ಅಪಮಾನ

ಟಾಕ್ಸಿಕ್ ವಿರುದ್ಧ ದೂರು.. ಮುಂದೇನು?

ರಾಕಿಂಗ್ ಸ್ಟಾರ್ ಯಶ್ ಸಿನಿಮಾ ಟಾಕ್ಸಿಕ್ ವಿಶ್ವದಾದ್ಯಂತ ಬಿಡುಗಡೆಗೆ ವೇದಿಕೆ ಅದ್ದೂರಿಯಾಗಿ ಸಜ್ಜಾಗುತ್ತಿದೆ. ಇನ್ನೇನು ಕೆಲವೇ ದಿನಗಳು ಬಾಕಿ ಉಳಿದಿರುವಾಗಲೇ ಈ ಸಿನಿಮಾಗೆ ಸಂಕಷ್ಟವೊಂದು ಎದುರಾಗಿದೆ. ಕ್ರೈಸ್ತ ಸಮುದಾಯದ ಒಕ್ಕೂಟವೊಂದು ಟಾಕ್ಸಿಕ್ ಸಿನಿಮಾದ ಟೀಸರ್‌ನಲ್ಲಿ ಪ್ರಸಾರವಾದ ದೃಶ್ಯಗಳಿಂದ ತಮ್ಮ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗಿದೆ ಎಂದು ದೂರು ನೀಡಿದ್ದಾರೆ.

ಟಾಕ್ಸಿಕ್ ಸಿನಿಮಾ ಕನ್ನಡದ ಮತ್ತೊಂದು ಪ್ರಾಮಿಸಿಂಗ್ ಪ್ಯಾನ್ ಇಂಡಿಯಾ ಸಿನಿಮಾ. ಈ ಸಿನಿಮಾವನ್ನು ವಿಶ್ವದಾದ್ಯಂತ ರಿಲೀಸ್ ಮಾಡುವುದಕ್ಕೆ ವೇದಿಕೆಗಳು ಸಜ್ಜಾಗುತ್ತಿವೆ. ಇನ್ನೊಂದು ಕಡೆ ಟಾಕ್ಸಿಕ್ ಸಿನಿಮಾ ಬ್ಯುಸಿನೆಸ್ ಕೂಡ ಶುರುವಾಗಿದೆ. ಕೆವಿಎನ್ ಪ್ರೊಡಕ್ಷನ್ಸ್ ಒಂದೊಂದೇ ಏರಿಯಾದ ಹಕ್ಕುಗಳ ವ್ಯಾಪಾರವನ್ನು ಕುದುರಿಸುತ್ತಾ ಬರುತ್ತಿದೆ. ಈ ಗ್ಯಾಪ್ ನಲ್ಲೇ ಇಂತಹದ್ದೊಂದು ದೂರು ದಾಖಲಿಸಲಾಗಿದೆ.

ಕೆಜಿಎಫ್ ಚಾಪ್ಟರ್ 2 ಬಳಿಕ ನಾಲ್ಕು ವರ್ಷಗಳಾದ್ಮೇಲೆ ಯಶ್ ನಟಿಸುತ್ತಿರುವ ಸಿನಿಮಾ ರಿಲೀಸ್ ಆಗುತ್ತಿದೆ. ಹೀಗಾಗಿ ಅವರ ಅಭಿಮಾನಿಗಳು ಸಿನಿಮಾವನ್ನು ಕಣ್ತುಂಬಿಕೊಳ್ಳುವುದಕ್ಕೆ ತುದಿಗಾಲಲ್ಲಿ ನಿಂತಿದ್ದರು. ಅದ್ಯಾವಾಗ ಟಾಕ್ಸಿಕ್ ಟೀಸರ್ ದಾಖಲೆ ವೀವ್ಸ್ ಕಂಡಿತೋ ಆಗಲೇ ಸಿನಿಮಾ ಕ್ರೇಜ್ ಮತ್ತಷ್ಟು ಹೆಚ್ಚಾಗಿತ್ತು. ಆದರೆ, ಟೀಸರ್‌ನ ಕೆಲವು ದೃಶ್ಯಗಳು ವಿವಾದಕ್ಕೂ ಎಡೆ ಮಾಡಿಕೊಟ್ಟಿದ್ದವು. ಮಹಿಳಾ ಒಕ್ಕೂಟ ಟೀಸರ್ ವಿರುದ್ಧ ಆಕ್ರೋಶ ಹೊರ ಹಾಕಿದ್ದವು. ಈಗ ಕ್ರೈಸ್ತ ಸಮುದಾಯ ಕಿಡಿಕಾರಿದೆ. ಅಷ್ಟಕ್ಕೂ ಕ್ರೈಸ್ತ ಸಮುದಾಯ ಆರೋಪವೇನು? ಯಾರಿಗೆಲ್ಲ ದೂರು ನೀಡಲಾಗಿದೆ? ಅನ್ನೋದನ್ನು ತಿಳಿಯುವುದಕ್ಕೆ ಮುಂದೆ ಓದಿ.

ಟಾಕ್ಸಿಕ್ ಟೀಸರ್‌ನಲ್ಲಿ ಕೆಲವು ಹಸಿ ಬಿಸಿ ದೃಶ್ಯಗಳು ಇವೆ. ಇದಕ್ಕೆ ಸೋಶಿಯಲ್ ಮೀಡಿಯಾದಲ್ಲಿ ನೆಟ್ಟಿಗರು ಟೀಕೆಗಳನ್ನು ಮಾಡಿದರೆ, ಇನ್ನು ಕೆಲವರು ಸಪೋರ್ಟ್ ಮಾಡಿದ್ದರು. ಮಹಿಳೆಯರು ಈ ದೃಶ್ಯಗಳ ವಿರುದ್ಧ ದೂರನ್ನು ನೀಡಿ ಅಸಮಧಾನ ಹೊರ ಹಾಕಿದ್ದರು. ಅಲ್ಲಿಗೆ ಮುಗೀತು ಅಂದುಕೊಳ್ಳುವಾಗಲೇ ಈಗ ಕ್ರೈಸ್ತ ಸಮುದಾಯ ಅಸಮಧಾನ ಹೊರ ಹಾಕಿದೆ. ದೃಶ್ಯಗಳನ್ನು ಸಿನಿಮಾದಿಂದ ತೆಗೆಯುವಂತೆ ಬೇಡಿಕೆ ಇಟ್ಟು ದೂರನ್ನು ನೀಡಿದೆ.

ಯಶ್ ಟಾಕ್ಸಿಕ್ ಟೀಸರ್‌ನಲ್ಲಿ ಕ್ರೈಸ್ತರ ದೇವದೂತ ಸಂತ ಮಿ ಕಯೇಲ್‌ಗೆ ಅಪಮಾನ ಆಗಿದೆ ಅನ್ನೋದು ನ್ಯಾಷನಲ್ ಕ್ರಿಶ್ಚಿಯನ್ ಫೆಡರೇಷನ್ ಆರೋಪ. ಈ ಸಂಘ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ ದೂರ ನೀಡಿದೆ.

ಹಾಗೇ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಗೃಹಸಚಿವರು ಹಾಗೂ ಸೆನ್ಸಾರ್ ಬೋರ್ಡ್‌ಗೂ ಕೂಡ ದೂರನ್ನು ನೀಡಿದೆ. ಟಾಕ್ಸಿಕ್ ಟೀಸರ್‌ನಲ್ಲಿ ಕ್ರೈಸ್ತರ ದೇವದೂತರಾದ ಸಂತ ಮಿಕಯೇಲ್ ಪ್ರತಿಮೆಯ ಮುಂದೆ ಅಶ್ಲೀಲ ದೃಶ್ಯಗಳ ಚಿತ್ರೀಕರಣ ಮಾಡಲಾಗಿದೆ.

ಇದರಿಂದ ಕ್ರೈಸ್ತ ಧರ್ಮದ ಭಾವನೆಗಳಿಗೆ ಧಕ್ಕೆಯಾಗಿದೆ. ಹೀಗಾಗಿ ಈಗಾಗಲೇ ಯೂಟ್ಯೂಬ್ ನಲ್ಲಿ ಇರುವ ದೃಶ್ಯಗಳನ್ನು ತೆಗೆಯಬೇಕು. ಜೊತೆಗೆ ಸಿನಿಮಾದಿಂದಲೂ ಈ ಅಶ್ಲೀಲ ದೃಶ್ಯಗಳನ್ನು ತೆಗೆಯಲು ಸೂಚನೆ ನೀಡುವಂತೆ ನ್ಯಾಷನಲ್ ಕ್ರಿಶ್ಚಿಯನ್ ಫೆಡರೇಷನ್ ಅಧ್ಯಕ್ಷ ಪ್ರದೀಪ್ ಕುಮಾರ್ ದೂರಿನಲ್ಲಿ ತಿಳಿಸಿದ್ದಾರೆ.

ಕ್ರೈಸ್ತರ ದೇವದೂತ ಸಂತ ಮಿಕಯೇಲ್ ಎದುರು ಚಿತ್ರಿಸಿರುವ ದೃಶ್ಯಗಳನ್ನು ತೆಗೆಯುವುದಷ್ಟೇ ಅಲ್ಲೇ, ಅಪಮಾನ ಮಾಡಿದ್ದಕ್ಕಾಗಿ ಕ್ರೈಸ್ತ ಸಮುದಾಯಕ್ಕೆ ಕ್ಷಮೆ ಕೇಳಬೇಕು. ಒಂದು ವೇಳೆ ಈ ದೃಶ್ಯಗಳನ್ನು ತೆಗೆಯದೆ ಹೋದಲ್ಲಿ ಕಾನೂನು ಚೌಕಟ್ಟಿನಲ್ಲಿ ಹೋರಾಟ ಮಾಡುವುದಾಗಿ ಎಚ್ಚರಿಕೆಯನ್ನೂ ನೀಡಿದ್ದಾರೆ. ಈ ದೂರಿನ ಬಗ್ಗೆ ಟಾಕ್ಸಿಕ್ ತಂಡ ಇನ್ನೂ ಪ್ರತಿಕ್ರಿಯೆ ನೀಡಬೇಕಿದೆ. ತಂಡಕ್ಕೆ ಎದುರಾಗಿರುವ ಮತ್ತೊಂದು ಸಂಕಷ್ಟವನ್ನು ಹೇಗೆ ಬಗೆ ಹರಿಸಿಕೊಳ್ಳುತ್ತೆ ಅನ್ನೋದು ಮುಂದಿನ ದಿನಗಳಲ್ಲಿ ಗೊತ್ತಾಗಲಿದೆ.

ಮತ್ತೊಂದು ಕೇಸ್, ಮತ್ತೊಮ್ಮೆ ಸೀತಾರಾಮ್ ಥ್ರಿಲ್ಲಿಂಗ್ ಜರ್ನಿ

5 ವರ್ಷಗಳ ಹಿಂದೆ ಚಿತ್ರಮಂದಿರಗಳಲ್ಲಿ ಬಿಡುಗಡೆಗೂ ಮುನ್ನ ಸೀತಾರಾಮ್ ಬಿನೋಯ್ ಸಿನಿಮಾ ಟಿವಿಗೆ ಬಂದು ಸದ್ದು ಮಾಡಿತ್ತು. ಈಗ ಆ ಚಿತ್ರದ ಸೀಕ್ವೆಲ್ ತೆರೆಗೆ ಬರಲು ಸಜ್ಜಾಗಿದೆ. ಮತ್ತೊಮ್ಮೆ ಖಡಕ್ ಪೊಲೀಸ್ ಆಫೀಸರ್ ಸೀತಾರಾಮ್ ಪಾತ್ರದಲ್ಲಿ ವಿಜಯ್ ರಾಘವೇಂದ್ರ ನಟಿಸಿದ್ದಾರೆ. ಸೆಕೆಂಡ್ ಕೇಸ್ ಆಫ್ ಸೀತಾರಾಮ್ ಟ್ರೈಲರ್ ಬಿಡುಗಡೆ ಆಗಿ ಗಮನ ಸೆಳೆದಿದೆ.

ಈ ಬಾರಿ ಕನ್ನಡ ಹಾಗೂ ತಮಿಳಿನಲ್ಲಿ ಏಕಕಾಲಕ್ಕೆ ಸೀತಾರಾಮ್ ಬಿನೋಯ್ ಸಿನಿಮಾ ಪ್ರೇಕ್ಷಕರ ಮುಂದೆ ಬರಲಿದೆ. ಮೊದಲ ಚಿತ್ರಕ್ಕೆ ಕೆಲಸ ಮಾಡಿದ್ದ ತಂಡವೇ ಈ ಬಾರಿ ಕೂಡ ಕೈಜೋಡಿಸಿದೆ. ಮತ್ತೊಂದು ಕ್ರೈಂ ಸಸ್ಪೆನ್ಸ್ ಥ್ರಿಲ್ಲರ್ ಕಥೆ ಹೇಳಲು ನಿರ್ದೇಶಕ ದೇವಿ ಪ್ರಸಾದ್ ಶೆಟ್ಟಿ ತಯಾರಾಗಿದ್ದಾರೆ. ಸಾತ್ವಿಕ್ ಹೆಬ್ಬಾರ್ ಜೊತೆ ಸೇರಿ ಸ್ವತಃ ನಿರ್ದೇಶಕರೇ ಸಿನಿಮಾ ನಿರ್ಮಾಣ ಮಾಡಿದ್ದಾರೆ.

ಸೀತಾರಾಮ್ ಬಿನೋಯ್ ಬಳಿಕ ವಿಜಯ್ ಹಾಗೂ ದೇವಿ ಪ್ರಸಾದ್ ಶೆಟ್ಟಿ ಕೇಸ್ ಆಫ್ ಕೊಂಡಾಣ ಸಿನಿಮಾ ಕಟ್ಟಿಕೊಟ್ಟಿದ್ದರು. ಆ ಚಿತ್ರಕ್ಕೂ ಒಳ್ಳೆ ರೆಸ್ಪಾನ್ಸ್ ಸಿಕ್ಕಿತ್ತು. ಇದೀಗ 3ನೇ ಬಾರಿ ಈ ಜೋಡಿ ಪ್ರೇಕ್ಷಕರಿಗೆ ಥ್ರಿಲ್ ಕೊಡಲು ಬರ್ತಿದೆ. ಟೈಟಲ್ ಹೇಳುವಂತೆ ಈ ಬಾರಿ ಮತ್ತೊಂದು ನಿಗೂಢ ಪ್ರಕರಣ ಭೇದಿಸಲು ಸೀತಾರಾಮ್ ಮುಂದಾಗಿದ್ದಾರೆ. ನಿರ್ದೇಶಕ ಪವನ್ ಒಡೆಯರ್ ಚಿತ್ರತಂಡದ ಬೆನ್ನಿಗೆ ನಿಂತಿದ್ದಾರೆ.

ವಿಜಯ್ ರಾಘವೇಂದ್ರ ಜೊತೆಗೆ ಗೋಪಾಲಕೃಷ್ಣ ದೇಶಪಾಂಡೆ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಇನ್ನುಳಿದಂತೆ ಬಹುತೇಕ ಹೊಸ ಪ್ರತಿಭೆಗಳೇ ಚಿತ್ರದಲ್ಲಿ ನಟಿಸಿರುವುದು ಗೊತ್ತಾಗುತ್ತಿದೆ. ಹಿಂದಿನ ಸಿನಿಮಾದಲ್ಲಿ ಹಾವೇರಿಯಿಂದ ಶಿವಮೊಗ್ಗದ ಆನೆಗಡ್ಡೆ ಪೊಲೀಸ್ ಠಾಣೆಗೆ ವರ್ಗಾವಣೆಯಾಗುವ ಪೊಲೀಸ್ ಅಧಿಕಾರಿ ಸೀತಾರಾಮ್, ಅಲ್ಲಿನ ದರೋಡೆ ಮತ್ತು ಕೊಲೆಗಳ ಹಿಂದಿನ ದುಷ್ಟರ ಹೆಡೆಮುರಿ ಕಟ್ಟುವ ಕಥೆಯಿತ್ತು. ಮುಂದುವರೆದ ಭಾಗದಲ್ಲಿ ಕೂಡ ಅದೇ ಛಾಯೆ ಕಂಡು ಬರುತ್ತದೆ.

ಟ್ರೈಲರ್ ಪ್ರತಿ ಫ್ರೇಮ್ ಅದೇ ಫೀಲ್ ಕೊಡುವಂತೆ ಭಾಸವಾಗುತ್ತದೆ. ಹೋಟೆಲ್ ಜಯಣ್ಣ ಮಿಸ್ಸಿಂಗ್ ಅಂತೆ ಸರ್ ಎನ್ನುವ ಡೈಲಾಗ್ ಮೂಲಕ ಟ್ರೈಲರ್ ಶುರುವಾಗುತ್ತದೆ. ನಡುವೆ ಒಂದು ಲವ್ ಸ್ಟೋರಿ. ಸೈಕೊಪಾತ್ ಅರ್ಭಟ, ಪ್ರಕರಣ ಭೇದಿಸುವುದು ಕಗ್ಗಂಟಾಗುತ್ತಾ ಹೋಗುತ್ತದೆ. ಮುಂದೇನಾಗುತ್ತದೆ ಎನ್ನುವುದನ್ನು ತೆರೆಮೇಲೆ ನೋಡಬೇಕು. ಮತ್ತಷ್ಟು ಇಂಟೆನ್ಸ್ ಆಗಿ ಈ ಬಾರಿ ಕಥೆ ಹೇಳುವ ಪ್ರಯತ್ನ ನಡ್ತೀದೆ.

ಫೆಬ್ರವರಿ 20ರಂದು ಸೆಕೆಂಡ್ ಕೇಸ್ ಆಫ್ ಸೀತಾರಾಮ್ ಸಿನಿಮಾ ಬಿಡುಗಡೆ ಮಾಡಲು ಚಿತ್ರತಂಡ ಮುಂದಾಗಿದೆ. ಹೇಮಂತ್ ಆಚಾರ್ಯ ಛಾಯಾಗ್ರಹಣ ಹಾಗೂ ನವನೀತ್ ಶ್ಯಾಮ್ ಸಂಗೀತ ಚಿತ್ರಕ್ಕಿದೆ. ಕ್ರೈಂ ಸಸ್ಪೆನ್ಸ್ ಜೊತೆಗೆ ಇದು ಮ್ಯೂಸಿಕಲ್ ಸಿನಿಮಾ ಎಂದು ಚಿತ್ರತಂಡ ಹೇಳಿದೆ. ಅಷ್ಟರಮಟ್ಟಿಗೆ ಚಿತ್ರದಲ್ಲಿ ಸಂಗೀತಕ್ಕೆ ಅವಕಾಶ ಇದೆ ಎನ್ನಲಾಗ್ತಿದೆ. ರವಿಚಂದ್ರನ್ ಎಂಬುವವರು ಸಿನಿಮಾ ವಿತರಣೆಗೆ ಮುಂದಾಗಿದ್ದಾರೆ.

ಕಳೆದ ವರ್ಷ ಎಫ್‌ಐಆರ್ 6 ಟು 6, ಸ್ವಪ್ನ ಮಂಟಪ ಹಾಗೂ ರಿಪ್ಪನ್ ಸ್ವಾಮಿ ಎಂಬ ಸಿನಿಮಾಗಳಲ್ಲಿ ವಿಜಯ್ ರಾಘವೇಂದ್ರ ಮಿಂಚಿದ್ದರು. ಹೊಸ ವರ್ಷದ ಆರಂಭದಲ್ಲೇ ಸೀತಾರಾಮ್ ಆಗಿ ಪ್ರೇಕ್ಷಕರ ಮುಂದೆ ಬರ್ತಿದ್ದಾರೆ. ಇನ್ನು ಎರಡ್ಮೂರು ಸಿನಿಮಾಗಳು ಅವರ ಕೈಯಲ್ಲಿದೆ. ಸೀತಾರಾಮ್ ಕೇಸ್‌ಗಳು ಇದೇ ರೀತಿ ಮುಂದುವರೆಯುವ ಸಾಧ್ಯತೆ ಇದೆ ಎಂದು ಚಿತ್ರತಂಡ ಹೇಳಿದೆ. ನಟಿಸೋಕೆ ನಾನು ಸಿದ್ದ ಎಂದು ವಿಜಯ್ ರಾಘವೇಂದ್ರ ತಿಳಿಸಿದ್ದಾರೆ.

ಕನ್ನಡದಲ್ಲಿ ಸಸ್ಪೆನ್ಸ್ ಥ್ರಿಲ್ಲರ್ ಸಿನಿಮಾಗಳ ಟ್ರೆಂಡ್ ನಡ್ತೀದೆ. ಕೇಸ್ ಆಫ್ ಕೊಂಡಾಣ, ಶಾಖಾಹಾರಿ, ಅಜ್ಞಾತವಾಸಿ, ರಕ್ಕಸಪುರದೋಳ್ ಕೆಲ ಸಿನಿಮಾಗಳು ಪ್ರೇಕ್ಷಕರಿಗೆ ಥ್ರಿಲ್ ಕೊಟ್ಟು ಗೆದ್ದಿವೆ. ಅದೇ ಸಾಲಿಗೆ ಸೆಕೆಂಡ್ ಕೇಸ್ ಆಫ್ ಸೀತಾರಾಮ್ ಸಿನಿಮಾ ಕೂಡ ಸೇರಿಕೊಳ್ಳುವ ಸುಳಿವು ಸಿಕ್ಕಿದೆ.

ಎಮ್‌ಬಿಬಿಎಸ್ ಡಿಗ್ರಿ ಪಡೆದ ನಟಿ, ಘಟಿಕೋತ್ಸವದ ವಿಡಿಯೋ ವೈರಲ್!

ಕಿಸ್ ಬ್ಯೂಟಿಯನ್ನು ಇನ್ಮೇಲೆ ಡಾ. ಶ್ರೀಲೀಲಾ ಅಂತ ಕರೀಬೇಕು!

ಶ್ರೀಲೀಲಾ ಈಗ ಎಂಬಿಬಿಎಸ್ ಪದವಿ ಪಡೆದುಕೊಂಡಿರುವ ಸುದ್ದಿ ಸಂಚಲನ ಮೂಡಿಸಿದೆ. ಕಿಸ್ ಸಿನಿಮಾ ಮೂಲಕ ಸ್ಯಾಂಡಲ್‌ವುಡ್‌ಗೆ ಪಾದಾರ್ಪಣೆ ಮಾಡಿದ್ದ ಶ್ರೀಲೀಲಾ, ತಮ್ಮ ಬಿಡುವಿಲ್ಲದ ಶೂಟಿಂಗ್ ಶೆಡ್ಯೂಲ್ ನಡುವೆಯೂ ವೈದ್ಯಕೀಯ ವ್ಯಾಸಂಗವನ್ನು ಯಶಸ್ವಿಯಾಗಿ ಮುಗಿಸಿದ್ದಾರೆ. ಘಟಿಕೋತ್ಸವದಲ್ಲಿ ಪದವಿ ಸ್ವೀಕರಿಸುವ ಮೂಲಕ ಡಾಕ್ಟರ್ ಶ್ರೀಲೀಲಾ ಆಗಿ ಹೊರಹೊಮ್ಮಿದ್ದಾರೆ.

ಸ್ಯಾಂಡಲ್‌ವುಡ್ ಮೂಲಕ ಬಣ್ಣದ ಲೋಕಕ್ಕೆ ಕಾಲಿಟ್ಟು, ಇದೀಗ ಟಾಲಿವುಡ್, ಕಾಲಿವುಡ್ ಮತ್ತು ಬಾಲಿವುಡ್‌ನಲ್ಲೂ ಮಿಂಚುತ್ತಿರುವ ನಟ ಶ್ರೀಲೀಲಾ ಹೊಸದೊಂದು ಸಾಧನೆ ಮಾಡಿದ್ದಾರೆ. ಹೌದು, ವೈದ್ಯಕೀಯ ವಿಭಾಗದಲ್ಲಿ ಪದವಿ ಓದುತ್ತದ್ದ ಶ್ರೀಲೀಲಾ, ನಟನೆ ಜೊತೆ ಜೊತೆಗೆ ಇದೀಗ ಎಂಬಿಬಿಎಸ್ ಡಿಗ್ರಿಯನ್ನು ಕಂಪ್ಲೀಟ್ ಮಾಡಿದ್ದಾರೆ. ಘಟಿಕೋತ್ಸವದ ಗೌನ್ ಮತ್ತು ಟೋಪಿ ಧರಿಸಿ ವೈದ್ಯಕೀಯ ಪದವಿ ಸ್ವೀಕರಿಸುತ್ತಿರುವ ಶ್ರೀಲೀಲಾ ಅವರ ಫೋಟೋಗಳು ಮತ್ತು ವಿಡಿಯೋಗಳು ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದ್ದು, ಸಾರ್ವಜನಿಕರು ಮತ್ತು ಅಭಿಮಾನಿಗಳ ಗಮನ ಸೆಳೆದಿದೆ.

ಎಂಬಿಬಿಎಸ್ ಅಂದ್ರೆ ಸಾಮಾನ್ಯವಲ್ಲ: ಎಂಬಿಬಿಎಸ್ ಓದುವುದು ಸಾಮಾನ್ಯ ಸಂಗತಿಯಲ್ಲ. ಕಠಿಣವಾದ ಶ್ರಮವನ್ನು ಬೇಡುವ ವೈದ್ಯಕೀಯ ವ್ಯಾಸಂಗವನ್ನು, ತಮ್ಮ ಬ್ಯುಸಿ ಶೂಟಿಂಗ್ ಶೆಡ್ಯೂಲ್‌ಗಳ ನಡುವೆಯೂ ಕಂಪ್ಲೀಟ್ ಮಾಡಿದ್ದಾರೆ ಶ್ರೀಲೀಲಾ. ಹೀಗೆ ಎರಡನ್ನೂ ಒಟ್ಟಿಗೆ ನಿಭಾಯಿಸಿರುವುದು ಈ ತಲೆಮಾರಿನ ನಟಿಯರಲ್ಲಿ ಅಪರೂಪದ ಸಂಗತಿಯಾಗಿದೆ. ಸಾಲು ಸಾಲು ಸಿನಿಮಾಗಳ ಶೂಟಿಂಗ್ ಮತ್ತು ಪ್ರಚಾರ ಕಾರ್ಯಗಳ ಸವಾಲುಗಳ ನಡುವೆಯೂ, ಶಿಸ್ತು ಮತ್ತು ಏಕಾಗ್ರತೆಯಿಂದ ಓದನ್ನು ಮುಗಿಸಿ ಶ್ರೀಲೀಲಾ, ಈಗ ಡಾಕ್ಟರ್ ಶ್ರೀಲೀಲಾ ಆಗಿ ಹೊರಹೊಮ್ಮಿದ್ದಾರೆ.

ಅಮ್ಮನಂತೆಯೇ ವೈದ್ಯೆಯಾದ ಶ್ರೀಲೀಲಾ: ಓದು ಮತ್ತು ನಟನೆ ಎರಡಕ್ಕೂ ಅವರು ನೀಡಿರುವ ಸಮಾನ ಆದ್ಯತೆ, ಸಮಯ ನಿರ್ವಹಣೆ ನಿಜಕ್ಕೂ ಮೆಚ್ಚುವಂತಹದ್ದು. ಅಂದಹಾಗೆ, ಶ್ರೀಲೀಲಾ ಅವರ ತಾಯಿ ಸ್ವರ್ಣಲತಾ ಕೂಡ ಬೆಂಗಳೂರಿನಲ್ಲಿ ಖ್ಯಾತ ಸ್ತ್ರೀರೋಗ ತಜ್ಞರಾಗಿದ್ದಾರೆ. ಮಗಳಿಗೆ ಭರತನಾಟ್ಯ ಮತ್ತು ಸಿನಿಮಾದಲ್ಲಿ ಆಸಕ್ತಿ ಮೂಡಿಸುವಲ್ಲಿ ಹಾಗೂ ಎಂಬಿಬಿಎಸ್ ಓದುವಲ್ಲಿ ತಾಯಿಯ ಪ್ರೋತ್ಸಾಹವೇ ಮುಖ್ಯ ಕಾರಣ ಎಂದು ಶ್ರೀಲೀಲಾ ಹಲವು ಬಾರಿ ಹೇಳಿಕೊಂಡಿದ್ದಾರೆ.

ಪ್ಯಾನ್ ಇಂಡಿಯಾ ಸ್ಟಾರ್ ಆಗಿರುವ ನಟಿ: ಶ್ರೀಲೀಲಾ ಅವರ ಈ ಸಾಧನೆಗೆ ಅಭಿಮಾನಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಕನ್ನಡ ಮತ್ತು ತೆಲುಗು ಸಿನಿಮಾಗಳ ಮೂಲಕ ವೃತ್ತಿಜೀವನ ಆರಂಭಿಸಿದ ಶ್ರೀಲೀಲಾ, ಅತಿ ಕಡಿಮೆ ಅವಧಿಯಲ್ಲಿ ಪ್ಯಾನ್ ಇಂಡಿಯಾ ಮಟ್ಟದಲ್ಲಿ ಗುರುತಿಸಿಕೊಂಡರು. ಭಾಷೆಯ ಹಂಗಿಲ್ಲದೆ ಪ್ರೇಕ್ಷಕರನ್ನು ಸೆಳೆಯುವ ಅವರ ಸಾಮರ್ಥ್ಯವೇ ಅವರ ಜನಪ್ರಿಯತೆ ಹೆಚ್ಚಲು ಕಾರಣವಾಗಿದ್ದು, ಇದೀಗ ಅವರ ಬಾಲಿವುಡ್ ಪ್ರವೇಶದ ಬಗ್ಗೆಯೂ ನಿರೀಕ್ಷೆ ಹೆಚ್ಚಿದೆ.

ಶ್ರೀಲೀಲಾ ಪದವಿ ಸ್ವೀಕರಿಸುತ್ತಿರುವ ವಿಡಿಯೋ ವೈರಲ್: ಇನ್ನು, ಸಿನಿಮಾ ವಿಚಾರಕ್ಕೆ ಬರುವುದಾದರೆ, ಅನುರಾಗ್ ಬಸು ನಿರ್ದೇಶನದ ಮ್ಯೂಸಿಕಲ್ ಲವ್ ಸ್ಟೋರಿಯಲ್ಲಿ ಬಾಲಿವುಡ್ ನಟ ಕಾರ್ತಿಕ್ ಆರ್ಯನ್ ಜೊತೆ ಶ್ರೀಲೀಲಾ ಕಾಣಿಸಿಕೊಳ್ಳಲಿದ್ದಾರೆ. ಹಾಗೆಯೇ, ರಾಜಕುಮಾರ್ ಪೆರಿಯಸಾಮಿ ನಿರ್ದೇಶನದ, ತಮಿಳು ನಟ ಧನುಷ್ ಅವರ ಮುಂದಿನ ಸಿನಿಮಾದಲ್ಲೂ ಶ್ರೀಲೀಲಾ ನಟಿಸಲಿದ್ದಾರೆ. ಈಚೆಗಷ್ಟೇ ಪರಾಶಕ್ತಿ ಚಿತ್ರದಲ್ಲಿ ಶ್ರೀಲೀಲಾ ನಟಿಸಿದ್ದರು. ಆ ಸಿನಿಮಾ ಹೇಳಿಕೊಳ್ಳುವಂತಹ ಲಾಭವನ್ನು ಮಾಡಲಿಲ್ಲ.

ಚಿಕ್ಕಣ್ಣನ ಜೋಡೆತ್ತುಗೆ ಅಮೃತಾ ಅಯ್ಯರ್ ಜೋಡಿ!

ಚೌಕ, ಕಾಟೇರಾ, ರಾಬರ್ಟ್ ಮತ್ತು ದಿ ಡೆವಿಲ್ ಚಿತ್ರಗಳಿಗೆ ಹೆಸರುವಾಸಿಯಾದ ಛಾಯಾಗ್ರಾಹಕ ಸುಧಾಕರ್ ಎಸ್ ರಾಜ್ ಅವರ ನಿರ್ದೇಶನದ ಚೊಚ್ಚಲ ಚಿತ್ರ ಇದಾಗಿದೆ. ಸಿನಿಮಾ ಚಿತ್ರೀಕರಣ ಜನವರಿ 5 ರಿಂದ ಆರಂಭವಾಗಿದೆ.

ಹನುಮಾನ್ ಖ್ಯಾತಿಯ ನಟಿ ಅಮೃತಾ ಅಯ್ಯರ್ ಚಿಕ್ಕಣ್ಣ ಅಭಿನಯದ, ಗ್ರಾಮೀಣ ಹಿನ್ನೆಲೆಯ ಜೋಡೆತ್ತು ಚಿತ್ರದ ಮೂಲಕ ಸ್ಯಾಂಡಲ್‌ವುಡ್‌ಗೆ ಕಾಲಿಡುತ್ತಿದ್ದಾರೆ.

ಚೌಕ, ಕಾಟೇರಾ, ರಾಬರ್ಟ್ ಮತ್ತು ದಿ ಡೆವಿಲ್ ಚಿತ್ರಗಳಿಗೆ ಹೆಸರುವಾಸಿಯಾದ ಛಾಯಾಗ್ರಾಹಕ ಸುಧಾಕರ್ ಎಸ್ ರಾಜ್ ಅವರ ನಿರ್ದೇಶನದ ಚೊಚ್ಚಲ ಚಿತ್ರ ಇದಾಗಿದೆ. ಸಿನಿಮಾ ಚಿತ್ರೀಕರಣ ಜನವರಿ 5 ರಿಂದ ಆರಂಭವಾಗಿದೆ.

ಅಮೃತಾ ಅಯ್ಯರ್ ಈಗಾಗಲೇ ತಮ್ಮ ಪಾತ್ರದ ಕೆಲವು ಭಾಗಗಳನ್ನು ಚಿತ್ರೀಕರಿಸಿದ್ದಾರೆ. ಪ್ಲಾನ್ ಪ್ರಕಾರ ಈ ಚಿತ್ರವು ಮುಂದುವರಿಯುತ್ತಿದ್ದು, ಈ ಹಿಂದೆ ಘೋಷಿಸಲಾದ ಯೋಜನೆಗಳಿಗಿಂತ ಮುಂಚಿತವಾಗಿ ಥಿಯೇಟರ್ ನಲ್ಲಿ ಬಿಡುಗಡೆಯಾದರೆ, ಜೋಡೆತ್ತು ಅಮೃತಾ ಅಯ್ಯರ್ ನಟನೆಯ ಕನ್ನಡ ಚೊಚ್ಚಲ ಚಿತ್ರವಾಗುವ ಸಾಧ್ಯತೆಯಿದೆ. ಈ ಹಿಂದೆ ಗೋಲ್ಡನ್ ಸ್ಟಾರ್ ಗಣೇಶ್ ಅಭಿನಯದ ಸಿನಿಮಾದಲ್ಲಿ ಅಮೃತಾ ನಟಿಸುತ್ತಿದ್ದಾರೆ ಎಂದು ಹೇಳಲಾಗಿತ್ತು, ಆದರೆ ಈ ಸಂಬಂಧ ಇದುವರೆಗೆ ಯಾವುದೇ ಅಧಿಕೃತ ಮಾಹಿತಿ ಹೊರಬಿದ್ದಿಲ್ಲ.

ಗ್ರಾಮೀಣ ಹಿನ್ನೆಲೆಯಯಿರುವ ಸಿನಿಮಾದಲ್ಲಿ ಜೋಡೆತ್ತು ಹಳ್ಳಿಯ ಜೀವನದಲ್ಲಿ ಬೇರೂರಿರುವ ಕಥೆಯ ಬಗ್ಗೆ ತಿಳಿಸುತ್ತದೆ. ಹಾಸ್ಯ ಮತ್ತು ಭಾವನೆಯೊಂದಿಗೆ ಕಮರ್ಷಿಯಲ್ ಅಂಶಗಳ ಮಿಶ್ರಣವಿದೆ ಎಂದು ಹೇಳಲಾಗುತ್ತದೆ. ಸದ್ಯ ಒಳಾಂಗಣ ಸ್ಥಳಗಳಲ್ಲಿ ಪ್ರಮುಖ ಸನ್ನಿವೇಶಗಳನ್ನು ಚಿತ್ರೀಕರಿಸುತ್ತಿದ್ದಾರೆ.

ಕೆ ಸೋಮಶೇಖರ್ ತಮ್ಮ ಆಕಾಶ್ ಎಂಟರ್‌ಪ್ರೈಸಸ್ ಬ್ಯಾನರ್ ಅಡಿಯಲ್ಲಿ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ತಾಂತ್ರಿಕ ತಂಡದಲ್ಲಿ ಸಂಗೀತ ಸಂಯೋಜಕ ವಿ ಹರಿಕೃಷ್ಣ ಸೇರಿದ್ದಾರೆ, ಚಿತ್ರಕ್ಕೆ ಮಾಸ್ತಿ, ರಾಜಶೇಖರ್ ಮತ್ತು ರಘು ನಿಡುವಳ್ಳಿ ಸಂಭಾಷಣೆ ಬರೆದಿದ್ದಾರೆ, ಮೋಹನ್ ಬಿ ಕೆರೆ ನಿರ್ಮಾಣ ವಿನ್ಯಾಸವನ್ನು ನಿರ್ವಹಿಸಲಿದ್ದಾರೆ.



ಅಮೃತ ಅಯ್ಯರ್ ಮತ್ತು ಚಿಕ್ಕಣ್ಣ ಅವರ ಜೊತೆಗೆ, ಈ ಚಿತ್ರದಲ್ಲಿ ತೆಲುಗು ನಟ ಸುನಿಲ್ ಕೂಡ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಹಾಸ್ಯ ಮತ್ತು ಪಾತ್ರ-ಆಧಾರಿತ ಅಭಿನಯದಲ್ಲಿ ಬಹುಮುಖ ಪ್ರತಿಭೆಗೆ ಹೆಸರುವಾಸಿಯಾದ ಸುನಿಲ್, ಶೀಘ್ರದಲ್ಲೇ ತಮ್ಮ ಭಾಗಗಳ ಚಿತ್ರೀಕರಣವನ್ನು ಪ್ರಾರಂಭಿಸಲು ಸೆಟ್‌ಗೆ ಸೇರುವ ನಿರೀಕ್ಷೆಯಿದೆ.

ಅರಸೀಕೆರೆ: ಒಳಾಂಗಣ ಕ್ರೀಡಾಂಗಣ ಕಾಮಗಾರಿಗೆ ಚಾಲನೆ

6 ಕೋಟಿ ರೂ. ವೆಚ್ಚ | ರಾಜ್ಯದಲ್ಲಿಯೇ ಅರಸೀಕೆರೆ ಕ್ಷೇತ್ರ ಮಾದರಿ ಮಾಡುವ ಕನಸು: ಶಾಸಕ ಕೆ.ಎಂ.ಶಿವಲಿಂಗೇಗೌಡ

• ಪ್ರಜೋದಯ ವರದಿ

ಅರಸೀಕೆರೆ: ನಗರ ಮಾತ್ರವಲ್ಲ ಗ್ರಾಮೀಣ ಪ್ರದೇಶಗಳು ಸಹ ಸರ್ವತೋಮುಖ ಅಭಿವೃದ್ಧಿಯೊಂದಿಗೆ ಅರಸೀಕೆರೆ ವಿಧಾನಸಭಾ ಕ್ಷೇತ್ರ ರಾಜ್ಯದಲ್ಲೇ ಮಾದರಿ ಕ್ಷೇತ್ರ ಎಂದು ಕರಸಿಕೊಳ್ಳಬೇಕು, ಅದೇ ನನ್ನ ಮಹಾದಾಸೆ ಎಂದು ರಾಜ್ಯ ಗೃಹ ನಿರ್ಮಾಣ ಮಾಡಲಿ ಅಧ್ಯಕ್ಷರಾದ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಹೇಳಿಕೊಂಡರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ನಗರದ ಜೂನಿಯರ್ ಕಾಲೇಜು ಆವರಣದಲ್ಲಿ ಆರು ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿರುವ ಒಳಾಂಗಣ ಕ್ರೀಡಾಂಗಣದ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದಂತೆ ನಾನು ಕನಸು ಮಾತ್ರ ಕಂಡವನಲ್ಲ. ಆ ನಿಟ್ಟಿನಲ್ಲಿ ಸದನದ ಒಳಗೂ ಮತ್ತು ಹೊರಗೂ ನನ್ನದೇ ಆದ ರೀತಿಯಲ್ಲಿ ಹೋರಾಟ ಮಾಡಿ ತಂದ ಅನುದಾನದ ಫಲವೇ ಕ್ಷೇತ್ರದಲ್ಲಿ ನಡೆದಿರುವ ಅಭಿವೃದ್ಧಿ ಚಿತ್ರಣವನ್ನು ಸಾರುತ್ತಿದೆ ಎಂದರು.

ನದಿಯ ಮೂಲದಿಂದ ಶುದ್ಧ ಕುಡಿಯುವ ನೀರು ನಗರ ಪ್ರದೇಶದ ಮಾದರಿಯಲ್ಲಿ ಗ್ರಾಮೀಣ ಭಾಗದ ರಸ್ತೆಗಳ ಅಭಿವೃದ್ಧಿ ವಿದ್ಯುತ್ ಕ್ಷೇತ್ರದಲ್ಲಿ ಆಗಿರುವ ಕ್ರಾಂತಿ ಶಿಕ್ಷಣ ಕ್ಷೇತ್ರದ ಬೆಳವಣಿಗೆ ಹೀಗೆ ಹಲವು ಕ್ಷೇತ್ರಗಳಲ್ಲಿ ಆಗಿರುವ ಅಭಿವೃದ್ಧಿ ಕಾಮಗಾರಿಗಳು ಇಂದು ಅರಸೀಕೆರೆ ಕ್ಷೇತ್ರ ಮಾದರಿ ಕ್ಷೇತ್ರ ಅನ್ನುವಷ್ಟರ ಮಟ್ಟಿಗೆ ಬೆಳವಣಿಗೆ ಕಾಣಲು ಸಾಧ್ಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ನಗರಸಭೆ ನಿಕಟ ಪೂರ್ವ ಅಧ್ಯಕ್ಷ ಎಂ ಸಮಿವುಲ್ಲಾ ಅವರು ಮಾತನಾಡಿ, ಕ್ರೀಡಾಪಟುಗಳ ಬಹುದಿನದ ಅಪೇಕ್ಷೆಯಾಗಿದ್ದ ಒಳಾಂಗಣ ಕ್ರೀಡಾಂಗಣ ಶಿವಲಿಂಗೇಗೌಡ ಅವರ ವಿಶೇಷ ಆಸಕ್ತಿಯಿಂದಾಗಿ ಸರ್ಕಾರ ಮಂಜೂರು ಮಾಡಿದ್ದು ನೂತನವಾಗಿ ನಿರ್ಮಾಣವಾಗುತ್ತಿರುವ ಒಳಾಂಗಣ ಕ್ರೀಡಾಂಗಣದ ಕಾಮಗಾರಿ ಶೀಘ್ರವೇ ಪೂರ್ಣಗೊಂಡು ಕ್ರೀಡಾಪಟುಗಳು ಹಾಗೂ ನಗರದ ಜನತೆಗೆ ಇದರ ಪ್ರಯೋಜನ ದೊರೆಯುವಂತಾಗಲಿ ಎಂದು ಅವರು ಆಶಯ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ನಗರ ಯೋಜನಾ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಗಂಜಿಗೆರೆ ಚಂದ್ರಶೇಖರ್, ಕೆಪಿಸಿಸಿ ಕಾರ್ಯದರ್ಶಿ ಶಶಿಧರ್, ಗ್ಯಾರಂಟಿ ಯೋಜನೆಗಳ ತಾಲ್ಲೂಕು ಸಮಿತಿಯ ಅಧ್ಯಕ್ಷ ಧರ್ಮ ಶೇಖರ್, ನಗರಸಭೆ ಮಾಜಿ ಅಧ್ಯಕ್ಷ ಮೋಹನ್ ಕುಮಾರ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷೆ ಮಂಜುಳಾ ಬಾಯಿ ಚಂದ್ರ ನಾಯಕ್, ಪುರಸಭೆ ಮಾಜಿ ಅಧ್ಯಕ್ಷೆ ರುಕ್ಮಿಣಿ ಜೈಕುಮಾರ್, ಆರೋಗ್ಯ ರಕ್ಷಾ ಸಮಿತಿಯ ಸದಸ್ಯೆ ರೇಖಾ ಜಯಣ್ಣ, ಶಿಕ್ಷಣ ಸುಧಾರಣಾ ಸಮಿತಿಯ ಸದಸ್ಯ ವೈ.ಕೆ.ದೇವರಾಜ್ ಮತ್ತಿತರರು ಉಪಸ್ಥಿತರಿದ್ದರು.

ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧ ಖಾಲಿ: ಅಶೋಕ್ ಕಿಡಿ

• ಪ್ರಜೋದಯ ವರದಿ

ಬೆಂಗಳೂರು: ರಾಜ್ಯದಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿ ಖಾಲಿಯಾಗಿದ್ದು, ಇದು ಪಾಪರ್ ಸರ್ಕಾರದ ಸಂಕೇತವಾಗಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಕಿಡಿಕಾರಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಔಷಧಿ ಖರೀದಿಸಲು ಹಣವಿಲ್ಲ. ಪ್ಯಾರಾಸಿಟಾಮಾಲ್‌ನಿಂದ ಆರಂಭವಾಗಿ ಅಗತ್ಯವಾದ 800 ಕ್ಕೂ ಅಧಿಕ ಔಷಧಿಗಳು ಲಭ್ಯವಿಲ್ಲವೆಂದು ನಾನು 2024 ರ ಡಿಸೆಂಬರ್‌ನ ಅಧಿವೇಶನದಲ್ಲಿ ಹೇಳಿದ್ದೆ. ಆಗ ಸಚಿವ ದಿನೇಶ್ ಗುಂಡೂರಾವ್, ಕೂಡಲೇ ಔಷಧಿ ಖರೀದಿಸಲಾಗುವುದು ಎಂದು ಹೇಳಿದ್ದರು. ಇನ್ನೂ ಯಾವುದೇ ಔಷಧಿ ದಾಸ್ತಾನಿಲ್ಲ. ಈ ಮೂಲಕ ಆರೋಗ್ಯ ಇಲಾಖೆ ಅನಾರೋಗ್ಯ ಪೀಡಿತವಾಗಿದೆ. ಆಸ್ಪತ್ರೆಗಳ ನಿರ್ವಹಣೆಯ ಹಣದಿಂದ ಔಷಧಿ ಖರೀದಿಸುವ ದುಸ್ಥಿತಿಗೆ ಸರ್ಕಾರ ಬಂದಿದೆ. ಸಾಲ ಮಾಡಿ ಔಷಧಿ ಖರೀದಿಸುವ ಸ್ಥಿತಿ ಬಂದಿದೆ ಎಂದರು.

ಮಾರ್ಚ್‌ಗೆ ಟೆಂಡರ್‌ಗೆ ಅಂತಿಮಗೊಳಿಸಲು ಆರೋಗ್ಯ ಇಲಾಖೆಯಿಂದ ಆದೇಶ ಹೊರಡಿಸಲಾಗಿದೆ. ಅಂದರೆ ಮೇ, ಜೂನ್‌ವರೆಗೆ ಸರ್ಕಾರಿ ಆಸ್ಪತ್ರೆಗಳಿಗೆ ಔಷಧಿ ಬಾರದೇ ಇದ್ದರೆ ರೋಗಿಗಳು ಸಾಯಬೇಕಾಗುತ್ತದೆ. ಅಪಘಾತವಾದರೆ ಬ್ಯಾಂಡೇಜ್ ಕೂಡ ಸಿಗುವುದಿಲ್ಲ. ಕೆಲವು ಆಸ್ಪತ್ರೆಗಳಲ್ಲಿ ವೈದ್ಯರು ಅನಿವಾರ್ಯವಾಗಿ ಹೊರಗೆ ಔಷಧಿ ಖರೀದಿಗೆ ಚೀಟಿ ಬರೆದು ಕೊಡುತ್ತಿದ್ದಾರೆ. ನಮ್ಮ ಸರ್ಕಾರ ಇದ್ದಾಗ ಹೊರಗೆ ಔಷಧಿ ಖರೀದಿಗೆ ಚೀಟಿ ಬರೆಯಬಾರದೆಂದು ಸೂಚನೆ ನೀಡಲಾಗಿತ್ತು. ಕೇಂದ್ರ ಸರ್ಕಾರದ ಜನೌಷಧಿ ಕೇಂದ್ರಗಳನ್ನು ಸ್ಥಗಿತಗೊಳಿಸಲು ಸರ್ಕಾರ ಪ್ರಯತ್ನ ಮಾಡಿದೆ. ಈಗ ಜನರು ಜನೌಷಧಿ ಕೇಂದ್ರಗಳಲ್ಲೇ ಔಷಧಿ ಖರೀದಿಸುತ್ತಿದ್ದಾರೆ ಎಂದರು.

ಕಳೆದ ಬಜೆಟ್‌ನಲ್ಲಿ ಆರೋಗ್ಯ ಇಲಾಖೆಗೆ ಶೇ.30 ರಷ್ಟು ಅನುದಾನ ಕಡಿತವಾಗಿದೆ. ಐದು ಗ್ಯಾರಂಟಿಗಳಿಗಾಗಿ ಜನರಿಗೆ ನೀಡುವ ಔಷಧಿಯನ್ನು ಕೊರತೆ ಮಾಡಲಾಗಿದೆ. ಕೆಲವು ಸರ್ಕಾರಿ ಆಸ್ಪತ್ರೆಗಳಲ್ಲಿ ಐವಿ ದ್ರಾವಣ, ನೋವು ನಿವಾರಕ ಔಷಧಿ ಇಲ್ಲದೆ ಆಪರೇಶನ್ ಮಾಡುವುದಿಲ್ಲ ಎಂದು ಹೇಳಲಾಗಿದೆ. ಕಮಿಶನ್ ತರುವ ಇಲಾಖೆಗಳಿಗೆ ಗಮನ ನೀಡಿ, ಜನರ ಸಮಸ್ಯೆ ಬಗೆಹರಿಸುವ ಇಲಾಖೆಗಳನ್ನು ಕಡೆಗಣಿಸಲಾಗಿದೆ. ಇದು ಸರ್ಕಾರ ಪಾಪರ್ ಆಗಿರುವುದಕ್ಕೆ ಕನ್ನಡಿ ಎಂದರು.

ಕಾಂಗ್ರೆಸ್ ಶಾಸಕರು ಯಾವ ಅಧ್ಯಯನ ಮಾಡಲು ಹೋಗುತ್ತಿದ್ದಾರೆ ಎಂದು ಗೊತ್ತಿಲ್ಲ. ಪ್ರವಾಸ ಮಾಡಲು ಸಾಧ್ಯವಿಲ್ಲ. ಅಧ್ಯಯನ ಮಾಡಿದರೂ ನಂತರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕು. ಆದರೆ ಇಲ್ಲಿ ಮುಖ್ಯಮಂತ್ರಿ ಬದಲಾವಣೆ ಚರ್ಚೆ ನಡೆಯುತ್ತಿದ್ದು, ಈ ಬಗ್ಗೆ ನಿರ್ಧಾರ ಕೈಗೊಳ್ಳಲು ವಿದೇಶಕ್ಕೆ ಹೋಗುತ್ತಿದ್ದಾರೆ ಎಂಬ ಅನುಮಾನವಿದೆ. ಸರ್ಕಾರಿ ಶಾಲೆಯ ಮಕ್ಕಳು ಬಸ್ ಇಲ್ಲದೆ ಜೆಸಿಬಿ, ಟಿಪ್ಪರ್‌ನಲ್ಲಿ ಪ್ರಯಾಣ ಮಾಡುತ್ತಿದ್ದರೆ, ಶಾಸಕರು ಎಮಿರೇಟ್ಸ್ ವಿಮಾನದಲ್ಲಿ ಪ್ರಯಾಣ ಮಾಡುತ್ತಿದ್ದಾರೆ ಎಂದರು.

ಆಲೂರು: ವಿ.ಬಿ. ಜಿರಾಮ್ ಜಿ, ವಿಮಾ ತಿದ್ದುಪಡಿ ಕಾಯ್ದೆ, ಶಾಂತಿ ಕಾಯ್ದೆ ರದ್ದುಗೊಳಿಸಬೇಕು. ವಿದ್ಯುಚ್ಛಕ್ತಿ ತಿದ್ದುಪಡಿ, ಬೀಜ ಮಸೂದೆ, ಭೂ ಸ್ವಾಧೀನ ಕಾಯ್ದೆಯನ್ನು ಹಿಂಪಡೆಯಲು ಒತ್ತಾಯಿಸಿ, ಅಮೇರಿಕಾ ಮತ್ತು ಭಾರತದ ನಡುವಿನ ವ್ಯಾಪಾರ ಒಪ್ಪಂದವನ್ನು ವಿರೋಧಿಸಿ ತಾಲ್ಲೂಕು ಸಿ.ಐ.ಟಿ. ಸಂಘಟನೆ ವತಿಯಿಂದ ಪಟ್ಟಣದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ ತಹಸೀಲ್ದಾರ್ ರವರಿಗೆ ಮನವಿ ಸಲ್ಲಿಸಿದರು. ಅಧ್ಯಕ್ಷೆ ಶಾರದ, ಉಪಾಧ್ಯಕ್ಷೆ ಕವಿತಾ, ಕಾರ್ಯದರ್ಶಿ ಪೂರ್ಣಿಮ ಇನ್ನಿತರರು ನೇತೃತ್ವ ವಹಿಸಿದ್ದರು.

ಧರ್ಮಸ್ಥಳ ಪಾದಯಾತ್ರಿಕರಿಗೆ ಆಹಾರ ಪದಾರ್ಥ ವಿತರಣೆ

• ಪ್ರಜೋದಯ ವರದಿ

ಸಕಲೇಶಪುರ: ಶಿವರಾತ್ರಿ ಅಂಗವಾಗಿ ಧರ್ಮಸ್ಥಳಕ್ಕೆ ಪಾದಯಾತ್ರೆ ಹೊರಟಿರುವ ಭಕ್ತಾಧಿಗಳಿಗೆ ಪಟ್ಟಣದ ರಾಘವೇಂದ್ರ ಸ್ವಾಮಿ ಸೇವಾ ಟ್ರಸ್ಟ್ ವತಿಯಿಂದ ಕಾಫಿ, ಬ್ರೆಡ್, ಹಣ್ಣು ಹಂಪಲು, ಬಿಸ್ಕೆಟ್, ತಂಪು ಪಾನೀಯ ಹಾಗೂ ಕುಡಿಯುವ ನೀರನ್ನು ವಿತರಿಸುವ ಸೇವಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಮಾತನಾಡಿದ ಟ್ರಸ್ಟಿ ಬಾಲರಾಜ್, ಕಳೆದ ನಾಲ್ಕು ವರ್ಷಗಳಿಂದ ಶಿವರಾತ್ರಿ ಸಂದರ್ಭ ಧರ್ಮಸ್ಥಳಕ್ಕೆ ಪಾದಯಾತ್ರೆ ಹೊರಡುವ ಭಕ್ತಾದಿಗಳಿಗೆ ನಿರಂತರವಾಗಿ ಸೇವೆ ಸಲ್ಲಿಸಲಾಗುತ್ತಿದ್ದು, ಈ ವರ್ಷವೂ ಎರಡು ದಿನಗಳ ಕಾಲ ಬೆಳಿಗ್ಗೆ 4 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಪಾದಯಾತ್ರಿಕರಿಗೆ

ಅಗತ್ಯವಾದ ಆಹಾರಪದಾರ್ಥಗಳು ಹಾಗೂ ಪಾನೀಯಗಳನ್ನು ವಿತರಿಸಲಾಗುತ್ತಿದೆ ಎಂದು ತಿಳಿಸಿದರು.

ಇದೇ ರೀತಿ ಪಟ್ಟಣದಲ್ಲಿ ರಾಘವೇಂದ್ರ ಸ್ವಾಮಿಯವರ ಆರಾಧನೋತ್ಸವ ಹಾಗೂ ಜಯಂತೋತ್ಸವವನ್ನು ಕೂಡ ಟ್ರಸ್ಟ್ ವತಿಯಿಂದ ನಿಯಮಿತವಾಗಿ ಆಚರಿಸಲಾಗುತ್ತಿದೆ.

ಸಕಲೇಶಪುರದಲ್ಲಿ ಸಾವಿರಾರು ರಾಘವೇಂದ್ರ ಸ್ವಾಮಿ ಭಕ್ತರು ಇರುವುದರಿಂದ ಇಲ್ಲಿಯೇ ರಾಘವೇಂದ್ರ ಸ್ವಾಮಿಯ ಮಠವನ್ನು ಸ್ಥಾಪಿಸುವುದು ಭಕ್ತಾದಿಗಳ ಬಹುಕಾಲದ ಬೇಡಿಕೆಯಾಗಿದೆ. ಈ ನಿಟ್ಟಿನಲ್ಲಿ ಟ್ರಸ್ಟ್ ಅಧ್ಯಕ್ಷರಾದ ತಾರಾ ರಾಘವೇಂದ್ರ ಅವರ ನೇತೃತ್ವದಲ್ಲಿ ಪ್ರಯತ್ನಗಳು ನಡೆಯುತ್ತಿವೆ. ಭಕ್ತಾಧಿಗಳ ಸಹಕಾರ ಅಗತ್ಯ ಎಂದು ಹೇಳಿದರು.

ಸೇವಾ ಕಾರ್ಯಗಳಿಗೆ ಅಗತ್ಯವಾದ ಹಣವನ್ನು ಟ್ರಸ್ಟಿಗಳೇ ತಮ್ಮ ಕೈಲಾದಷ್ಟು ಸಹಾಯಧನ ನೀಡುವ ಮೂಲಕ ವ್ಯವಸ್ಥೆ ಮಾಡಲಾಗುತ್ತಿದೆ. ಭಕ್ತರಿಗೆ ಸೇವೆ ಸಲ್ಲಿಸುವುದರಿಂದ ನಮಗೆ ಅಪಾರ ಸಂತೋಷ ಹಾಗೂ ನೆಮ್ಮದಿ ಭಾವ ಮೂಡುತ್ತದೆ ಎಂದು ಹೇಳಿದರು.

ಶಾಸಕ ಸಿಮೆಂಟ್ ಮಂಜು ಅವರ ಅಭಿಮಾನಿಗಳು ಪಾದಯಾತ್ರೆಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಿದರು.

ಇದೇ ಸಂದರ್ಭದಲ್ಲಿ ಟ್ರಸ್ಟ್ ಸದಸ್ಯರಾದ ವಿಜೇತ್, ಜಗದೀಶ್, ಸೋಮಶೇಖರ್, ಅಪ್ಪಣ್ಣಿ, ಅಕ್ಷತ್, ಸೋಮಶೇಖರ್ ಹಾಗೂ ಭಕ್ತಾಧಿಗಳು ಉಪಸ್ಥಿತರಿದ್ದರು.

(ಗುರುವಾರದ ಕಾಫಿ ಧಾರಣೆ: 50 ಕೆಜಿಗೆ)

ಅರೇಬಿಕಾ ಪಾರ್ಚ್‌ಮೆಂಟ್– 23,000
ಅರೇಬಿಕಾ ಚೆರಿ–12,000
ರೊಬಸ್ಟಾ ಪಾರ್ಚ್‌ಮೆಂಟ್–17,300
ರೊಬಸ್ಟಾ ಚೆರಿ – 9,200

ಫೆ.15ರಂದು ಶ್ರೀ ಸಂತ ಸೇವಾಲಾಲ್ ಜಯಂತಿ

• ಪ್ರಜೋದಯ ವರದಿ

ಹಾಸನ: ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಫೆ.15 ರಂದು ಹಾಸನಾಂಬ ಕಲಾಕ್ಷೇತ್ರದಲ್ಲಿ ಬೆಳಿಗ್ಗೆ 11 ಗಂಟೆಗೆ ಸಂತ ಸೇವಾಲಾಲ್ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ, ಕರ್ನಾಟಕ ರಾಜ್ಯ ಗೃಹ ಮಂಡಳಿಯ ಅಧ್ಯಕ್ಷರು ಹಾಗೂ ಶಾಸಕ ಕೆ.ಎಂ. ಶಿವಲಿಂಗೇಗೌಡ ಗೌರವ ಉಪಸ್ಥಿತರಿರಲಿದ್ದು, ಶಾಸಕ ಸ್ವರೂಪ್ ಪ್ರಕಾಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದ ಶ್ರೇಯಸ್ ಎಂ.ಪಟೇಲ್, ಶಾಸಕರಾದ ಹೆಚ್.ಡಿ.ರೇವಣ್ಣ, ಸಿ.ಎನ್.ಬಾಲಕೃಷ್ಣ, ಎ.ಮಂಜು, ಹೆಚ್.ಕೆ ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಸದಸ್ಯರಾದ ಸೂರಜ್ ರೇವಣ್ಣ, ಮಧು ಜಿ.ಮಾದೇಗೌಡ, ಕೆ.ವಿವೇಕಾನಂದ ಅವರು ಭಾಗವಹಿಸಲಿದ್ದಾರೆ.

ಜಿಲ್ಲಾ ಬಂಜಾರ ಸಂಘದ ಉಪಾಧ್ಯಕ್ಷ ಧರ್ಮಪ್ಪ ಅವರು ಉಪನ್ಯಾಸ ನೀಡಲಿದ್ದಾರೆ.

ಖಾತೆದಾರರು ಕಡ್ಡಾಯವಾಗಿ ಕೆವೈಸಿ ನವೀಕರಣ ಮಾಡಿಸಬೇಕು

ಸುರಕ್ಷಿತ ವ್ಯವಹಾರಗಳನ್ನು ನಡೆಸಲು ಅವಶ್ಯಕ | ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕಿ ಲತಾಕುಮಾರಿ ಮನವಿ

• ಪ್ರಜೋದಯ ವರದಿ

ಬೇಲೂರು: ಬ್ಯಾಂಕ್ ಖಾತೆದಾರರು ತಮ್ಮ ಖಾತೆಗಳನ್ನು ಸಕ್ರಿಯವಾಗಿರಿಸಿಕೊಂಡು ಸುರಕ್ಷಿತ ವ್ಯವಹಾರಗಳನ್ನು ನಡೆಸಲು ಕಡ್ಡಾಯವಾಗಿ ಕೆವೈಸಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು ಎಂದು ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕಿ ಲತಾಕುಮಾರಿ ತಿಳಿಸಿದರು.

ಪಟ್ಟಣದಲ್ಲಿ ಆಯೋಜಿಸಿದ್ದ ಜಾಗೃತಿ ಜಾಥಾದ ಬಳಿಕ ಪತ್ರಿಕೆಯೊಂದಿಗೆ ಮಾತನಾಡಿದ ಅವರು, ರಿಸರ್ವ್ ಬ್ಯಾಂಕ್ ಮಾರ್ಗಸೂಚಿಗಳ ಪ್ರಕಾರ ಪ್ರತಿಯೊಬ್ಬ ಖಾತೆದಾರರು ತಮ್ಮ ಗುರುತಿನ ಹಾಗೂ ವಿಳಾಸದ ದಾಖಲೆಗಳನ್ನು ನವೀಕರಿಸಬೇಕಾಗಿದ್ದು, ಇದನ್ನು ನಿರ್ಲಕ್ಷಿಸಿದರೆ ಖಾತೆ ತಾತ್ಕಾಲಿಕವಾಗಿ ಸ್ಥಗಿತಗೊಳ್ಳುವ ಸಾಧ್ಯತೆ ಇದೆ ಎಂದು ಅವರು ಮಾಹಿತಿ ನೀಡಿದರು.

ಇತ್ತೀಚಿನ ದಿನಗಳಲ್ಲಿ ಸೈಬರ್ ವಂಚನೆ, ನಕಲಿ ಖಾತೆಗಳು ಮತ್ತು ಹಣಕಾಸು ಅಕ್ರಮಗಳನ್ನು ತಡೆಯಲು ಕೆವೈಸಿ ಅತ್ಯಂತ ಪ್ರಮುಖವಾಗಿದೆ. ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ಮತದಾರ ಗುರುತಿನ ಚೀಟಿ, ಪಾಸ್‌ಪೋರ್ಟ್ ಸೇರಿದಂತೆ ಮಾನ್ಯ ದಾಖಲೆಗಳೊಂದಿಗೆ ಬ್ಯಾಂಕ್ ಶಾಖೆಗೆ ಭೇಟಿ ನೀಡಿ ಕೆವೈಸಿ ನವೀಕರಣ ಮಾಡಿಸಬಹುದು. ಕೆಲವು ಬ್ಯಾಂಕುಗಳಲ್ಲಿ ಆನ್‌ಲೈನ್ ಮೂಲಕವೂ ಕೆವೈಸಿ ಪ್ರಕ್ರಿಯೆ ಪೂರ್ಣಗೊಳಿಸುವ ವ್ಯವಸ್ಥೆ ಇದೆ ಎಂದು ಸಲಹೆ ನೀಡಿದರು.

ಬೇಲೂರು ತಾಲ್ಲೂಕಿನ ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳ ವ್ಯವಸ್ಥಾಪಕರು ಹಾಗೂ ಸಿಬ್ಬಂದಿ ವರ್ಗ ಜಾಥಾದಲ್ಲಿ ಭಾಗವಹಿಸಿ ಜನರಿಗೆ ಕೆವೈಸಿ ಅಗತ್ಯತೆ ಕುರಿತು ಜಾಗೃತಿ ಮೂಡಿಸಿದರು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜಾಥಾ ನಡೆಸಿ, ಸಾರ್ವಜನಿಕರಿಗೆ ಹಂಚಿಕೆ ಪತ್ರಿಕೆಗಳನ್ನು ವಿತರಿಸಿ, ಸುರಕ್ಷಿತ ಬ್ಯಾಂಕಿಂಗ್ ಕ್ರಮಗಳ ಬಗ್ಗೆ ಮಾಹಿತಿ ನೀಡಲಾಯಿತು.

ವಿಶೇಷವಾಗಿ ಹಿರಿಯ ನಾಗರಿಕರು, ಪಿಂಚಣಿ ಪಡೆಯುವವರು ಹಾಗೂ ಗ್ರಾಮೀಣ ಭಾಗದ ಖಾತೆದಾರರು ಕೆವೈಸಿ ನವೀಕರಣ ಮಾಡಿಸಿಕೊಳ್ಳುವುದರಿಂದ ಸರ್ಕಾರದ ಸೌಲಭ್ಯಗಳು ನಿರಂತರವಾಗಿ ಲಭ್ಯವಾಗುತ್ತವೆ ಎಂದು ಲತಾಕುಮಾರಿ ಇದೇ ಸಂದರ್ಭದಲ್ಲಿ ಹೇಳಿದರು.

ಈ ಸಂದರ್ಭದಲ್ಲಿ ಬ್ಯಾಂಕ್ ಅಧಿಕಾರಿಗಳು, ಸಿಬ್ಬಂದಿ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಅರಕಲಗೂಡು: ಕಾರ್ಮಿಕ ಸಂಘಟನೆಗಳಿಂದ ಮೆರವಣಿಗೆ

• ಪ್ರಜೋದಯ ವರದಿ

ಅರಕಲಗೂಡು: ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನೀತಿ ಖಂಡಿಸಿ ಎಐಟಿಯುಸಿ ನೇತೃತ್ವದಲ್ಲಿ ವಿವಿಧ ಕಾರ್ಮಿಕ ಸಂಘಟನೆಗಳು ಪಟ್ಟಣದಲ್ಲಿ ಗುರುವಾರ ಪ್ರತಿಭಟನೆ ನಡೆಸಿದವು.

ಗ್ರಾಪಂ ಹೊರಗುತ್ತಿಗೆ ನೌಕರರು, ಅಂಗನವಾಡಿ ನೌಕರರು, ಬಿಸಿಯೂಟ ನೌಕರರು ಕೊತ್ತಲು ಗಣಪತಿ ಉದ್ಯಾನದಿಂದ ಪ್ರಮುಖ ಬೀದಿಗಳಲ್ಲಿ ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನೀತಿ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆಯಲ್ಲಿ ಅನಕೃ ವೃತಕ್ಕೆ ತೆರಳಿ ಮಾನವ ಸರಪಳಿ ನಿರ್ಮಿಸಿದರು. ಬಳಿಕ ಕೆಲಕಾಲ ರಸ್ತೆ ತಡೆ ನಡೆಸಿ ಪ್ರತಿಭಟಿಸಿದರು.

ಸಿಐಟಿಯು ಮುಖಂಡ ಲಿಂಗರಾಜ್ ಅವರು ಮಾತನಾಡಿ, ಕೇಂದ್ರ ಸರ್ಕಾರ ಕಾರ್ಪೊರೇಟ್ ಕಂಪನಿಗಳ ಹಿತ ಕಾಯುವ ಉದ್ದೇಶದಿಂದ ತಂದಿರುವ

ಕಾರ್ಮಿಕ ವಿರೋಧಿ ಕಾನೂನು ಕಾರ್ಮಿಕರ ಹಕ್ಕು ಮತ್ತು ಹಿತಾಸಕ್ತಿಗೆ ವಿರುದ್ಧವಾಗಿದ್ದು,ಕೂಡಲೆ ಇದನ್ನು ಹಿಂಪಡೆಯಬೇಕು, ರದ್ದುಪಡಿಸಿರುವ ಕನಿಷ್ಠ ವೇತನ ಪದ್ಧತಿಯನ್ನು ಪುನಃ ಜಾರಿಗೆ ತರಬೇಕು. ಅಂಗನವಾಡಿ, ಗ್ರಾಪಂ ನೌಕರರಿಗೆ ಸೇವಾ ಭದ್ರತೆ ದೊರಕಿಸಲು ಕ್ರಮ ಕೈಗೊಳ್ಳಬೇಕು. ವಿರೋಧಿ ನೀತಿಗಳನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಅಕ್ಷರ ದಾಸೋಹ ನೌಕರರ ಸಂಘದ ಅಧ್ಯಕ್ಷೆ ಯಶೋಧಮ್ಮ ಮಾತನಾಡಿದರು. ಮುಖಂಡರಾದ ಅಶೋಕ್, ಲೀನಾ ಡಯಾಸ್, ಅಂಬಿಕಾ, ಚಂದ್ರೇಗೌಡ, ಸುಬ್ರಹ್ಮಣ್ಯ ಉಪಸ್ಥಿತರಿದ್ದರು.

ಫೆ.15 ರಿಂದ ಮಹದೇಶ್ವರ ಸ್ವಾಮಿ ಜಾತ್ರಾ ಉತ್ಸವ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ತಾಲ್ಲೂಕಿನ ಪುರಾಣ ಪ್ರಸಿದ್ಧ ಪುರತನ ಗ್ರಾಮ ಮಾದಲಗೆರೆ ಶ್ರೀ ಮಹದೇಶ್ವರ ಸ್ವಾಮಿಯ 9ನೇ ವರ್ಷದ ಜಾತ್ರಾ ಮಹೋತ್ಸವ ಫೆ.15 ಭಾನುವಾರದಿಂದ ಫೆ.23 ರ ಸೋಮವಾರದವರೆಗೆ ವಿಜ್ರಂಭಣೆಯಿಂದ ನಡೆಯಲಿದೆ.

ಮಾದಲಗೆರೆ ಶ್ರೀ ಮಹದೇಶ್ವರ ಸ್ವಾಮಿ ದೇಗುಲವು ನಿಂಬೇಹಳ್ಳಿ, ಮಹದೇಶ್ವರ ಬಡಾವಣೆ, ಎಂ.ಕೆ.ಚಿಕ್ಕೆನಹಳ್ಳಿ, ಎಂ.ಕೆ.ಹೊಸೂರು, ಎಂ.ಕೆ. ರಂಗನಾಥಪುರ ಹಾಗೂ ಎಂ.ಕೆ. ಲಕ್ಷ್ಮೀಪುರ ಸೇರಿದಂತೆ ಏಳು ಬುಡಕಟ್ಟು ಗ್ರಾಮಗಳಿಗೆ ಒಳಪಡಲಿದೆ.

ಫೆ.15 ಭಾನುವಾರ ಮುಂಜಾನೆ ದೇಗುಲಕ್ಕೆ ಬುಡಕಟ್ಟು ಗ್ರಾಮಸ್ಥರು ಹಸಿರು ಚಪ್ಪರ ಹಾಕಲಿದ್ದು ತಳಿರು ತೋರಣಗಳಿಂದ ಸಿಂಗರಿಸಲಿದ್ದಾರೆ. ವಿದ್ಯುತ್ ದೀಪಲಂಕಾರ ಮಾಡಲಿದ್ದು ಉತ್ಸವದ ಬೀದಿಯನ್ನು ಸ್ವಚ್ಛಗೊಳಿಸಿ ರಂಗೋಲಿ ಬಿಡಿಸಲಾಗುವುದು.

ಶ್ರೀ ಮಹದೇಶ್ವರಸ್ವಾಮಿ, ಶ್ರೀ ಶಂಭುಲಿಂಗೇಶ್ವರ ಸ್ವಾಮಿ ಹಾಗೂ ಶ್ರೀ ಸೋಮೇಶ್ವರ ಸ್ವಾಮಿ ದೇಗುಲಗಳಲ್ಲಿ ಪಂಚಾಮೃತ ಅಭಿಷೇಕ, ಜಾಗರಣೆ, ಮಹಾಶಿವರಾತ್ರಿ ವಿಶೇಷ ಪೂಜೆಗಳು ನೆರವೇರಲಿವೆ.

ಫೆ.16 ಸೋಮವಾರ ಸಂಜೆ ಮಂಗಳವಾದ್ಯ ವೈಭವದೊಂದಿಗೆ ಮೂಲಸ್ಥಾನದ ಸನ್ನಿಧಿಗೆ ಶ್ರೀ ಸ್ವಾಮಿಯವರ ಆಗಮನ, ಗಂಗಾ ಪೂಜೆ, ಧ್ವಜಾರೋಹಣ, ಶ್ರೀ ಗಣಪತಿ ಪೂಜೆ, ಶ್ರೀ ಸ್ವಾಮಿಯವರಿಗೆ ಪಂಚಾಮೃತ ಅಭಿಷೇಕ ನಡೆಯಲಿದೆ.

ಫೆ. 17 ಮಂಗಳವಾರ ವಿಶೇಷ ಪೂಜೆ, ಫೆ.18 ಬುಧವಾರ ಸಂಜೆ 5 ಗಂಟೆಗೆ ಕೋಲಾಟ ಕಾರ್ಯಕ್ರಮ ನಡೆಯಲಿದೆ. ಫೆ.19 ಗುರುವಾರ ರಾತ್ರಿ 8.30 ಗಂಟೆಗೆ ಸಂಗೀತ ರಸ ಸಂಜೆ ಆಯೋಜಿಸಲಾಗಿದೆ.

ಫೆ.20 ಶುಕ್ರವಾರ ಎಂದಿನಂತೆ ವಿಶೇಷ ಪೂಜಾ ವಿಧಿ ವಿಧಾನಗಳು, ಹುಲಿವಾಹನ ಸೇವೆ ಹಾಗೂ ಅನ್ನದಾಸೋಹ ನಡೆಯಲಿದೆ. ಫೆ.21 ಶನಿವಾರ ರಾತ್ರಿ 8.30 ಗಂಟೆಗೆ ಸಂಗೀತ ರಸಸಂಜೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

ಫೆ. 22 ಭಾನುವಾರ ವಿಶೇಷ ಪೂಜೆಯೊಂದಿಗೆ ವೀರಭದ್ರನ ಕುಣಿತ, ವಾದ್ಯ ವೈಭವಗಳೊಂದಿಗೆ ಶ್ರೀ ಸ್ವಾಮಿಯವರ ಉತ್ಸವ ನಡೆಯಲಿದೆ.

ಫೆ. 23 ಸೋಮವಾರ ವಿವಿಧ ವಿಶೇಷ ಪೂಜೆ, ಸಂಜೆ 7 ಗಂಟೆಗೆ ನಿಂಬೇಹಳ್ಳಿ ಗ್ರಾಮಕ್ಕೆ ಶ್ರೀ ಸ್ವಾಮಿಯವರ ಪ್ರವೇಶದೊಂದಿಗೆ ಜಾತ್ರಾ ಮಹೋತ್ಸವಕ್ಕೆ ತೆರೆ ಬೀಳಲಿದೆ.

ಸರ್ಕಾರಿ ಶಾಲೆಗಳ ಅಭಿವೃದ್ಧಿಯೇ ಗ್ರಾಮಗಳ ಅಭಿವೃದ್ಧಿ

ಮಕ್ಕಳಲ್ಲಿ ಶಿಸ್ತು, ಸಮಯ, ಬದ್ಧತೆ ಅತೀ ಅಗತ್ಯ | ಮೊಬೈಲ್‌ನಿಂದ ದೂರವಿರಿ

• ಪ್ರಜೋದಯ ವರದಿ

ಹಳೇಬೀಡು: ಗ್ರಾಮಾಂತರ ಪ್ರದೇಶದಲ್ಲಿ ಸರ್ಕಾರಿ ಶಾಲೆಗಳನ್ನು ಉಳಿಸಲು ಸ್ಥಳೀಯ ಜನತೆಯ ಸಹಕಾರ ಬಹು ಮುಖ್ಯವಾಗಿದೆ ಎಂದು ಬೇಲೂರು ತಾಲ್ಲೂಕಿನ ಶಿಕ್ಷಕರ ಸಂಘದ ಅಧ್ಯಕ್ಷ ಎಸ್.ಬಿ.ಪಾಲಾಕ್ಷ ತಿಳಿಸಿದರು.

ಇಲ್ಲಿಗೆ ಘಟ್ಟದಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರ ನಲಿ- ಕಲಿ ಆದೇಶವನ್ನು ತೆಗೆದು ಸರ್ಕಾರಿ ಹಲವು ಶಾಲೆಗಳಲ್ಲಿ ಎಲ್.ಕೆ.ಜಿ- ಯು.ಕೆ.ಜಿ.ಯನ್ನು ಸೇರಿಸಿ ಶಾಲೆಗಳನ್ನು ಉಳಿಸುವ ಉದ್ದೇಶದಿಂದ ಹಲವಾರು ಯೋಜನೆ ಜಾರಿಗೆ ತಂದಿದೆ. ರಾಜ್ಯದ ಶಿಕ್ಷಣ ಸಚಿವರು ವಿಧಾನಸಭೆ ಅಧಿವೇಶನದಲ್ಲಿ ಯಾವುದೇ ಹಳ್ಳಿಯ ಶಾಲೆಯನ್ನು ಮುಚ್ಚುವದಿಲ್ಲ ಎಂದು ಹೇಳಿದ್ದಾರೆ. ಆದರೆ ಹಿರಿಯ ಅಧಿ



ಕಾರಿ ಮಟ್ಟದಲ್ಲಿ (ಮ್ಯಾಗ್ನೆಟ್ ಶಾಲೆ) ಖಾಸಗಿ ಶಾಲೆಗಳ ಹೋಲು ವಂತೆ ಆಕರ್ಷಣೀಯ ಶಾಲೆಯನ್ನು ತೆರೆಯುವಂತೆ ಆದೇಶ ಬರಬಹುದು. ಸರ್ಕಾರಿ ಶಾಲೆಗಳನ್ನು ಉಳಿಸಿ, ಬೆಳೆಸಬೇಕು ಎಂದು ಅಭಿಪ್ರಾಯಪಟ್ಟರು.

ರಾಜ್ಯ ನೌಕರ ಸಂಘದ ತಾಲ್ಲೂಕು ಘಟಕದ ಉಪಾಧ್ಯಕ್ಷ ಪೂರ್ಣೇಶ್ ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ಮೌಲ್ಯ ಶಿಕ್ಷಣ ಕಡಿಮೆ ಆಗುತ್ತಿರುವುದರಿಂದ ಸರ್ಕಾರಿ ಶಾಲಾ ಶಿಕ್ಷಣ ಕುಂಠಿತವಾಗಿದೆ. ಇಂದಿನ ಮಕ್ಕಳಿಗೆ ಶಿಕ್ಷಕರು ಯಾವ ಶಿಕ್ಷೆಯನ್ನು ಕೊಡಬಾರದು, ಕೊಟ್ಟರೆ ಪೋಷಕರು ಬಂದು ನಮ್ಮ ಮೇಲೆ ದೂರು ನೀಡುತ್ತಾರೆ. ಮೌಲ್ಯ ಶಿಕ್ಷಣವನ್ನು ಹೊರತುಪಡಿಸಿದರೆ ಮಕ್ಕಳಲ್ಲಿ ವಿದ್ಯಾಭ್ಯಾಸ ಜೊತೆಗೆ ಹೆಚ್ಚು ಶಿಸ್ತು, ಸಮಯ, ಬದ್ಧತೆ ಮಕ್ಕಳಲ್ಲಿ ಬರುತ್ತದೆ ಎಂದರಲ್ಲದೆ, ಇಂದಿನ ಮಕ್ಕಳು ದೂರದರ್ಶನ, ಮೊಬೈಲ್ ವ್ಯಾಮೋಹಕ್ಕೆ ಹೋಗಿ ಪುಸ್ತಕಗಳ ಓದುವ ಹವ್ಯಾಸ ಕಡಿಮೆಯಾಗಿದೆ. ಇದರ ಬಗ್ಗೆ ಶಿಕ್ಷಕರು ಏನು ಮಾಡಲು ಸಾಧ್ಯವಾಗುತ್ತಿಲ್ಲ, ಇದಕ್ಕೆ ಪೋಷಕರು ಸಹಕಾರ ನೀಡಬೇಕು ಎಂದು ತಿಳಿಸಿದರು.

ಕ್ಲಸ್ಟರ್ ಸಿ.ಆರ್.ಪಿ.ಕೆ.ಎಸ್. ಪಾಲಾಕ್ಷ ಮಾತನಾಡಿ, ಈ ಶಾಲೆಯಲ್ಲಿ ಸುಮಾರು 47 ಮಕ್ಕಳು ಹೊಂದಿದ್ದು 1 ರಿಂದ 7ನೇ ತರಗತಿಯಲ್ಲಿ ನಾಲ್ಕು ಜನ ಶಿಕ್ಷಕರು ತಮ್ಮ ಪಾಠ ಪ್ರವಚನವನ್ನು ತುಂಬಾ ಅಚ್ಚುಕಟ್ಟಾಗಿ ಮಾಡುತ್ತಿದ್ದಾರೆ. ಒಳ್ಳೆಯ ಫಲಿತಾಂಶ ನೀಡುತ್ತಿದ್ದು ಶಾಲೆಯಲ್ಲಿ ಅದ್ಭುತವಾದ ವಾರ್ಷಿಕೋತ್ಸವ ಕಾರ್ಯಕ್ರಮವಾಗಿದೆ ಇಲ್ಲಿಯ ಮುಖ್ಯ ಶಿಕ್ಷಕ ರಮೇಶ್ ಎಲ್ಲಾ ಶಿಕ್ಷಕರನ್ನು ಸಮಾನತೆಯ ಕಂಡು ಶಾಲೆ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಈ ವಾರ್ಷಿಕೋತ್ಸವದಲ್ಲಿ ಹೆಚ್ಚಿನ ರೀತಿಯಲ್ಲಿ ಅವರದೇ ಶ್ರಮವನ್ನು ಹಾಕಿ ವಾರ್ಷಿಕೋತ್ಸವದಲ್ಲಿ ಸುಮಾರು 25 ರಿಂದ 30 ಸಾಂಸ್ಕೃತಿಕ ಕಾರ್ಯಕ್ರಮ ಮಕ್ಕಳಲ್ಲಿ ಮಾಡಿಸಿ ಗ್ರಾಮಾಂತರ ಪ್ರದೇಶ ಹೆಚ್ಚುಗಾರಿಕೆ ವಿಷಯವಾಗಿದೆ. ಹಳೇ ವಿದ್ಯಾರ್ಥಿಗಳು ಮತ್ತು ಗ್ರಾಮಸ್ಥರಿಗೆ ಗೌರವ ಸಮರ್ಪಣೆ ಮಾಡಲಾಯಿತು.

ಭಾರತಿ ರಘು, ಮುಖ್ಯ ಶಿಕ್ಷಕರಾದ ರಮೇಶ, ಮೋಹನ್‌ಕುಮಾರ್, ಬೂದೇಶ್, ಶರತ್ ಇನ್ನಿತರರು ಹಾಜರಿದ್ದರು.

ವಿವಿಧ ಕಾರ್ಮಿಕ ಸಂಘಟನೆಗಳಿಂದ ರಸ್ತೆ ತಡೆ | ವಿವಿಧ ಕಾಯ್ದೆಗಳ ತಿದ್ದುಪಡಿಗೆ ಖಂಡನೆ

ಕಾರ್ಮಿಕ ನೀತಿಗಳನ್ನು ವಿರೋಧಿಸಿ ಪ್ರತಿಭಟನೆ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಕೇಂದ್ರ ಸರ್ಕಾರದ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ವಿರೋಧಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆಸಿಟಿಯು) ವತಿಯಿಂದ ಕರೆ ನೀಡಿರುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರದ ಅಂಗವಾಗಿ ಗುರುವಾರ ಪಟ್ಟಣದ ಆಸ್ಪತ್ರೆ ವೃತ್ತದಲ್ಲಿ ಕಾರ್ಮಿಕರ ಸಂಘಟನೆಯ ಪದಾಧಿಕಾರಿಗಳು ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಅದಕ್ಕೂ ಮೊದಲು ತಾಲೂಕು ಕಚೇರಿ ಮುಂಭಾಗ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದ ಸಿಐಟಿಯು ಜಿಲ್ಲಾ ಮುಖಂಡ ಎಚ್.ಎಸ್. ಮಂಜುನಾಥ್, ಬಂಡವಾಳಶಾಹಿಗಳಿಗೆ ಪರವಾದ ಮತ್ತು ಕಾರ್ಮಿಕರಿಗೆ ಮಾರಕವಾದ ನೀತಿಗಳನ್ನು ಕೇಂದ್ರ ಸರ್ಕಾರ ಅನುಸರಿಸುತ್ತಿದೆ. ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನಾಲ್ಕು ಕಾರ್ಮಿಕ ಸಂಹಿತೆಗಳು ಯುವಜನತೆ ಮತ್ತು ಶ್ರಮಿಕ ವರ್ಗವನ್ನು ಆಧುನಿಕ ಗುಲಾಮಗಿರಿಗೆ ತಳ್ಳಲಿದೆ. 4 ಕಾರ್ಮಿಕ ಕೋಡ್‌ಗಳನ್ನು ಜಾರಿಗೊಳಿಸಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಹಾಕಿದರು. ಕಾರ್ಮಿಕ ನೋಡ್‌ಗಳನ್ನು ಹಿಂಪಡೆದುಕೊಳ್ಳಬೇಕು, ರಾಜ್ಯ ಸರ್ಕಾರ 4 ಕಾರ್ಮಿಕ ಕೋಡ್‌ಗಳಿಗೆ ನಿಯಮಗಳನ್ನು ರೂಪಿಸದೇ ಜಾರಿ ಮಾಡಬಾರದು. 29 ಕಾರ್ಮಿಕ ಕಾಯ್ದೆಗಳನ್ನು 4 ಕಾರ್ಮಿಕ ಕೋಡ್‌ಗಳಾಗಿ ಜಾರಿಗೊಳಿಸಿ ಆರ್ಥಿಕ ಮತ್ತು ರಾಜಕೀಯ ದಾಳಿಯಾಗಿದೆ ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಕಿಡಿಕಾರಿದರು.

ಕೇಂದ್ರದ ಕಾರ್ಮಿಕರ ನೀತಿಗಳಿಂದ ನೇರವಾದ ಹೊಡೆತ ಸ್ಥಳೀಯ

ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಬೀಳಲಿದೆ. ಕಾರ್ಮಿಕರ ಹಿತ ಕಾಪಾಡುವ ಬದಲಿಗೆ ಬಂಡವಾಳ ಶಾಹಿಗಳ ಹಿತ ಸರ್ಕಾರಗಳಿಗೆ ಮುಖ್ಯವಾಗಿದೆ. ಕಾಯಂಯೇತರ ಕಾರ್ಮಿಕರ ಕಾಯಂಗೆ ತಿಲಾಂಜಲಿ ಇಟ್ಟಿದೆ. ಸಂಹಿತೆ ಮೂಲಕ ನಿಗದಿ ಅವಧಿಯ ಉದ್ಯೋಗಕ್ಕೆ ಅವಕಾಶ ನೀಡಿ ಕಾಯಂ ಉದ್ಯೋಗದಿಂದ ಕಾರ್ಮಿಕರನ್ನು ಹೊರ ಹಾಕಲಾಗಿದೆ ಎಂದು ಆರೋಪಿಸಿದರು.

ವಿದ್ಯುಚ್ಛಕ್ತಿ ಖಾಸಗೀಕರಣ, ಪ್ರಸರಣ ಮತ್ತು ಅನುಷ್ಠಾನ ನಿರ್ವಹಣೆ ಖಾಸಗಿ ಬಂಡವಾಳಗಾರರಿಗೆ ನೀಡುವ ಮೂಲಕ ರೈತರು, ಜನ ಸಾಮಾನ್ಯರ ಸಬ್ಸಿಡಿಗೆ ಕಲ್ಲು ಹಾಕಿದೆ ಎಂದು ಕಿಡಿಕಾರಿದರಲ್ಲದೆ, ಭೂ ಸ್ವಾಧೀನ ಕಾಯ್ದೆಯನ್ನು ಹಿಂಪಡೆಯಬೇಕು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಂದಿರುವ ಭೂ ಸುಧಾರಣಾ, ಎಪಿಎಂಸಿ, ಜಾನುವಾರು ಸಂರಕ್ಷಣಾ ತಿದ್ದುಪಡಿ ಕಾಯ್ದೆಗಳನ್ನು ಹಿಂಪಡೆಯಬೇಕು, ವಿದ್ಯುಚ್ಛಕ್ತಿ ಖಾಸಗೀಕರಣ ಮಾಡುವುದನ್ನು ನಿಲ್ಲಿಸಬೇಕು. ಬೀಜ ಮಸೂದೆ ಕಾಯ್ದೆಯನ್ನ ಹಿಂಪಡೆಯಬೇಕು ಎಂದು ಮನವಿ ಮಾಡಿದರು.

ತಾಲೂಕು ಕಚೇರಿ ಮುಂಭಾಗದಿಂದ ಸಾಗಿದ ಪ್ರತಿಭಟನಾ ರ್‍ಯಾಲಿ ನವೋದಯ ವೃತ್ತದ ಹೊಸ ಬಸ್ ನಿಲ್ದಾಣ ಮುಖಾಂತರ ಮೈಸೂರು ರಸ್ತೆಯಲ್ಲಿ ಸಾಗಿ ನಂತರ ಆಸ್ಪತ್ರೆ ವೃತ್ತದಲ್ಲಿ ರಸ್ತೆ ತಡೆ ನಡೆಸಿ ರಾಜ್ಯ, ಕೇಂದ್ರ ಸರ್ಕಾರಗಳ ನೀತಿಗಳನ್ನು ಖಂಡಿಸಿ ರಸ್ತೆ ತಡೆ ನಡೆಸಲಾಯಿತು.

ಪ್ರತಿಭಟನೆಯಲ್ಲಿ ಅಂಗನವಾಡಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಜಯಲಕ್ಷ್ಮಿ, ತೇಜಸ್‌ಗೌಡ, ವಾಸು, ಚಂದ್ರೇಗೌಡ, ಸಹ ಕಾರ್ಯದರ್ಶಿ ಲಕ್ಷ್ಮೀಗೌಡ, ಗೋವಿಂದರಾಜು, ಮಂಜಣ್ಣ ದಂಡೋರ, ಹರೀಶ, ಹಾಗೂ ಹಲವು ಸಂಘಟನೆಗಳ ಮುಖಂಡರು ಭಾಗಿಯಾಗಿದ್ದರು.

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್ ರವರ ಕಾರ್ಯಾಲಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ

ಕಛೇರಿ ದೂರವಾಣಿ: 08176–252749

ಟೆಂಡರ್ ಪ್ರಕಟಣೆ ಸಂಖ್ಯೆ: 36/2025–26 ದಿನಾಂಕ: 09.02.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ ವ್ಯಾಪ್ತಿಯ ಅರಸೀಕೆರೆ ತಾಲ್ಲೋಕಿಗೆ 2022–23ನೇ ಸಾಲಿನ 2053–00–800–0–12(422)ರ ಪರಿಶಿಷ್ಟ ಪಂಗಡ ಯೋಜನೆಯಡಿಯಲ್ಲಿ ಅನುಮೋದನೆಯಾಗಿರುವ ಅರಸೀಕೆರೆ ತಾ: ಬಾಣಾವರ ಹೋಬಳಿ ಮಾಸ್ತಿಹಳ್ಳಿ ಗ್ರಾಮದಲ್ಲಿರುವ ಶ್ರೀ ಕೆಂಚರಾಯಸ್ವಾಮಿ ದೇವಸ್ಥಾನದ ದುರಸ್ಥಿ/ಜೀರ್ಣೋದ್ಧಾರ ಕಾಮಗಾರಿ RDPR/2025-26/ BD/ WORK_INDENT24534 ಟೆಂಡರ್ ಮೊತ್ತ ರೂ 5.63 ಲಕ್ಷಗಳಿಗೆ ಲೋಕೋಪಯೋಗಿ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್‌ರೋಲ್ ಮಾಡಿಸಿರುವ ಅರ್ಹ ಗುತ್ತಿಗೆದಾರರಿಂದ ಸ್ಪರ್ಧಾತ್ಮಕ ಟೆಂಡರನ್ನು KPPP ಅಂತರ್ಜಾಲದಲ್ಲಿ ದಿನಾಂಕ: 25.02.2026ರ ಸಂಜೆ 5.00ಘಂಟೆಯವರೆಗೆ ಟೆಂಡರ್‌ನ್ನು (EXCLUDING GST) ನಿಗಧಿತ ನಮೂನೆಗಳನ್ನು HTTPS://KPPP.KARNATAKA.GOV.IN/KPPP ನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ: 25.02.2026ರ ಸಂಜೆ 5.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿನಾಂಕ 24.02.2026ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿನಾಂಕ: 27.02.2026ರಂದು ಬೆಳಿಗ್ಗೆ 11.00ಗಂಟೆಗೆ ಗುತ್ತಿಗೆದಾರರ ಬಿಡ್ಡನ್ನು ತೆರೆಯಲಾಗುವುದು. ಕಾಮಗಾರಿಗಳ ವಿವರಗಳು KPPP ಅಂತರ್ಜಾಲದಲ್ಲಿ ಲಭ್ಯವಿರುತ್ತವೆ. ಕಾಮಗಾರಿಯನ್ನು ಹಿಂದುಳಿದ ವರ್ಗಗಳ CATEGORY-2A ವರ್ಗಕ್ಕೆ ಸೇರಿದ ಗುತ್ತಿಗೆದಾರರಿಗೆ ಮೀಸಲಿರಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಪ.ರಾಜ್.
ಇಂ.ವಿಭಾಗ, ಚನ್ನರಾಯಪಟ್ಟಣ.

ವಾಸಾಸಂಇ/ಹಿಸನಿ/ಹಾಸನ/1053/ಕೆಎಸ್‌ಎಂಸಿಎ/2025–26

ಕೇಂದ್ರ ಕಾರ್ಮಿಕ ಸಂಹಿತೆ ವಿರೋಧಿಸಿ ಬ್ಯಾಂಕ್ ನೌಕರರ ಪ್ರತಿಭಟನೆ

• ಪ್ರಜೋದಯ ವರದಿ

ಹಾಸನ: ಕೇಂದ್ರ ಸರ್ಕಾರ ಜಾರಿಗೆ ತರಲು ಮುಂದಾಗಿರುವ ಹೊಸ ಕಾರ್ಮಿಕ ಸಂಹಿತೆಗಳು ಕಾರ್ಮಿಕ ವಲಯ ದಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಗಿದ್ದು, ಕಾನೂನು ಸರಳೀಕರಿಸಿ ಉದ್ಯೋಗ ವಾತಾವರಣ ಸುಧಾರಿಸಬೇಕೆಂದು ಆಗ್ರಹಿಸಿ ಕಾವೇರಿ ಗ್ರಾಮೀಣ ಬ್ಯಾಂಕ್ ನೌಕರರ ಸಂಘ, ಕರ್ನಾಟಕ ಗ್ರಾಮೀಣ ಬ್ಯಾಂಕ್ ಅಧಿಕಾರಿಗಳ ಸಂಘ, ಕರ್ನಾಟಕ ಗ್ರಾಮೀಣ ಬ್ಯಾಂಕ್ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘ ಜಂಟಿ ಕ್ರಿಯಾ ಸಮಿತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಕರ್ನಾಟಕ ಗ್ರಾಮೀಣ ಬ್ಯಾಂಕ್ ಯೂನಿಯನ್ ಸಹಾಯಕ ಕಾರ್ಯದರ್ಶಿ ಪ್ರಭು ಅವರು ಮಾತನಾಡಿ, ಹೊಸ ನಿಯಮಗಳ ಪ್ರಕಾರ, ದಿನಕ್ಕೆ ಗರಿಷ್ಠ 12 ಗಂಟೆ ವರೆಗೆ ಕೆಲಸ ಮಾಡಿಸಲು ಅವಕಾಶ ಕಲ್ಪಿಸಲಾಗಿದೆ. ವಾರಕ್ಕೆ ಒಟ್ಟು 48 ಗಂಟೆಗಳ ಮಿತಿ ಉಳಿದಿದ್ದರೂ, ದಿನನಿತ್ಯದ ಕೆಲಸದ ಅವಧಿ ಹೆಚ್ಚುವ ಸಾಧ್ಯತೆ ಇರುವು ದರಿಂದ ಕಾರ್ಮಿಕರ ಮೇಲೆ ಒತ್ತಡ ಹೆಚ್ಚಾಗಲಿದೆ. ದೀರ್ಘಕಾಲದ ಕೆಲಸ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ. ಓವರ್‌ಟೈಮ್ ಲೆಕ್ಕಾಚಾರದಲ್ಲಿ ಗೊಂದಲ ಇದೆ ಎಂದರು.

ಕಂಪನಿಗಳು ಈ ನಿಯಮಗಳನ್ನು ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆ ಇದ್ದು, ಕಾರ್ಮಿಕರಿಗೆ ಸಲ್ಲಬೇಕಾದ ಹೆಚ್ಚುವರಿ ವೇತನ ತಲುಪದೆ ಹೋಗುವ ಭಯವೂ ವ್ಯಕ್ತವಾಗಿದೆ. 300ಕ್ಕೂ ಹೆಚ್ಚು ಕಾರ್ಮಿಕರಿರುವ ಸಂಸ್ಥೆಗಳಲ್ಲಿ ಸರ್ಕಾರದ ಪೂರ್ವಾ ನುಮತಿ ಇಲ್ಲದೆ ಉದ್ಯೋ ಗಿಗಳನ್ನು ಕೆಲಸದಿಂದ ಬಿಡಿಸಲು ಅವಕಾಶ ನೀಡಲಾಗಿದೆ ಎಂಬ ಅಂಶವೂ ಚರ್ಚೆಗೆ ಕಾರಣವಾಗಿದೆ. ಅದರಿಂದ ಉದ್ಯೋಗ ಭದ್ರತೆ ಕುಸಿಯಬಹುದು ಎಂಬ ಆತಂಕ ಕಾರ್ಮಿಕ ವಲಯದಲ್ಲಿ ವ್ಯಕ್ತವಾಗಿದೆ.

ತಾತ್ಕಾಲಿಕ ಮತ್ತು ಫಿಕ್ಸ್‌ಡ್ ಟರ್ಮ್ ನೇಮಕಾತಿ ಹೆಚ್ಚಾಗುವ ಸಾಧ್ಯತೆ ಇದೆ. ಅದರಿಂದಶಾಶ್ವತ ಉದ್ಯೋಗ ಪ್ರಮಾಣ ಕಡಿಮೆಯಾಗಬಹುದು ಹಾಗೂ ಕಾರ್ಮಿಕರ ಭವಿಷ್ಯ ಅಸ್ಥಿರ ವಾಗಬಹುದೆಂದು ಅಳಲು ತೋಡಿಕೊಂಡರು.

ಸಾರ್ವತ್ರಿಕ ಮುಷ್ಕರ: ಕೇಂದ್ರದ ವಿರುದ್ಧ ಎಡಪಕ್ಷಗಳಿಂದ ರಸ್ತೆ ತಡೆ

ಅಂಚೆ ಕಚೇರಿ ಎದುರು ಬಹಿರಂಗ ಸಮಾವೇಶ | ನೂರಾರು ಮಹಿಳೆಯರು ಭಾಗಿ

• ಪ್ರಜೋದಯ ವರದಿ

ಹಾಸನ: ಕೇಂದ್ರ ಸರ್ಕಾರ ಜಾರಿಗೊಳಿಸಿರುವ ನಾಲ್ಕು ಕಾರ್ಮಿಕ ಸಂಹಿತೆ ವಾಪಾಸ್ ಪಡೆಯಬೇಕು ಹಾಗು ಅಮೇರಿಕಾ ಜೊತೆಗಿನ ಇತ್ತೀಚಿನ ಒಪ್ಪಂದ ರದ್ದುಪಡಿಸಬೇಕೆಂದು ಆಗ್ರಹಿಸಿ ದೇಶಾದ್ಯಂತ ಎಡಪಕ್ಷಗಳಿಂದ ಕರೆ ಕೊಟ್ಟಿದ್ದ ಸಾರ್ವತ್ರಿಕ ಮುಷ್ಕರಕ್ಕೆ ನಗರ ಸೇರಿ ಜಿಲ್ಲಾದ್ಯಂತ ಬೆಂಬಲ ವ್ಯಕ್ತವಾಯಿತು.

ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆಸಿಟಿಯು), ಸಂಯುಕ್ತ ಹೋರಾಟ ಕರ್ನಾಟಕ (ಎಸ್‌ಹೆಚ್‌ಕೆ) ಹಾಗು ಜಿಲ್ಲಾ ಜನಪರ ಚಳುವಳಿಗಳ ಒಕ್ಕೂಟದಿಂದ ನಗರದ ಪ್ರಧಾನ ಅಂಚೆ ಕಚೇರಿ ಎದುರು ರಸ್ತೆ ತಡೆ ನಡೆಸಲಾಯಿತು.

ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ಅವರು ಮಾತನಾಡಿ, ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನಾಲ್ಕು ಕಾರ್ಮಿಕ ಸಂಹಿತೆಗಳು ಕಾರ್ಮಿಕರ ಹಕ್ಕುಗಳನ್ನು ದುರ್ಬಲಗೊಳಿಸುತ್ತಿವೆ. 29 ಕಾರ್ಮಿಕ ಕಾನೂನುಗಳನ್ನು ರದ್ದುಗೊಳಿಸಿ 4 ಸಂಹಿತೆಗಳನ್ನು ಜಾರಿಗೊಳಿಸಿರುವುದು ಕಾರ್ಮಿಕರ ಮೇಲೆ ಆರ್ಥಿಕ ಹಾಗು ರಾಜಕೀಯ ದಾಳಿ ನಡೆಸಲಾಗಿದೆ. ಸಂಘ ರಚನೆ ಹಕ್ಕಿಗೆ ನಿರ್ಬಂಧ, ಸ್ಥಾಯಿ ಆದೇಶಗಳ ವ್ಯಾಪ್ತಿ ಕಡಿತ ಹಾಗು ನಿಗದಿತ ಅವಧಿಯ ಉದ್ಯೋಗ ಪದ್ಧತಿ ಜಾರಿಯಿಂದ ಉದ್ಯೋಗ ಭದ್ರತೆಗೆ ಧಕ್ಕೆಯಾಗಿದೆ ಎಂದರು.

ಕಾರ್ಖಾನೆಗಳ ವ್ಯಾಖ್ಯಾನದಲ್ಲಿ ಕಾರ್ಮಿಕರ ಮಿತಿ ಹೆಚ್ಚಳ ಹಾಗು ಗುತ್ತಿಗೆ ಕಾರ್ಮಿಕರ ಲೈಸೆನ್ಸ್ ಮಿತಿ ಹೆಚ್ಚಳದಿಂದ ಬಹುತೇಕ ಕಾರ್ಮಿಕರು

ಇಎಸ್‌ಐ, ಪಿಎಫ್, ಗ್ರಾಚ್ಯುಟಿ, ಬೋನಸ್ ಸೇರಿ ಕಾನೂನುಬದ್ಧ ಸೌಲಭ್ಯಗಳಿಂದ ಹೊರಗುಳಿಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಸಮಾನ ಕೆಲಸಕ್ಕೆ ಸಮಾನ ವೇತನ ಎಂಬ ತತ್ವವನ್ನು ಜಾರಿಗೆ ತರುವ ಬದಲು ತಳಹಂತದ ಕೂಲಿ ನಿಗದಿ ಮಾಡಿರುವುದು ವೇತನ ಹೆಚ್ಚಳದ ಮೇಲೆ ದುಷ್ಪರಿಣಾಮ ಬೀರುತ್ತದೆ. ವಿದ್ಯುಚ್ಛಕ್ತಿ ತಿದ್ದುಪಡಿ, ಭೂಸ್ವಾಧೀನ ಕಾಯ್ದೆ ತಿದ್ದುಪಡಿ, ಬೀಜ ಮಸೂದೆ ಸೇರಿ ಜನವಿರೋಧಿ ನೀತಿಗಳನ್ನು ಹಿಂಪಡೆಯಬೇಕು. ರಾಜ್ಯ ಸರ್ಕಾರವೂ ಕಾರ್ಮಿಕ ಸಂಹಿತೆಗಳಿಗೆ ನಿಯಮಾವಳಿ ರಚನೆ ಕೈಬಿಡಬೇಕೆಂದು ಒತ್ತಾಯಿಸಿದರು.

ಕಾರ್ಮಿಕರ ವೇತನದ ಪಾಲು ಇಳಿಕೆಯಾಗುತ್ತಿರುವುದು, ಕೆಲಸದ ಹಕ್ಕಿನ ಮೇಲೆ ದಾಳಿ, ಸಾರ್ವಜನಿಕ ವಲಯಗಳ ಖಾಸಗೀಕರಣ ಹಾಗು ಬೆಲೆ ಏರಿಕೆ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಸರ್ಕಾರಗಳು ಬಂಡವಾಳಗಾರರ ಪರ ನೀತಿಗಳನ್ನು ಮುಂದುವರಿಸುತ್ತಿರುವುದು ಸಾಮಾಜಿಕ ಅಸಮಾನತೆ ಹೆಚ್ಚಿಸುತ್ತಿದೆ ಎಂದು ಆರೋಪಿಸಿದರು.

ಮುಷ್ಕರದಲ್ಲಿ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಬಿ.ಪುಷ್ಪ, ಎಐಟಿಯುಸಿ ಜಿಲ್ಲಾಧ್ಯಕ್ಷ ಎಂ.ಸಿ.ಡೋಂಗ್ರೆ, ಕರ್ನಾಟಕ ಪ್ರಾಂತ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಹೆಚ್.ಆರ್. ನವೀನ್ ಕುಮಾರ್, ರೈತ ಮುಖಂಡ ಬಾಬು, ಬ್ಯಾಂಕ್ ನೌಕರರ ಸಂಘದ ಪರಮಶಿವಯ್ಯ, ಆರ್. ಕುಮಾರ್, ದಲಿತ ಮುಖಂಡರಾದ ರಾಜಶೇಖರ್, ಈರೇಶ್, ವಿಮಾ ನೌಕರರ ಸಂಘದ ವಿಶ್ವನಾಥ್, ರವಿಕುಮಾರ್, ಸಂವಿಧಾನ ಓದು ಅಭಿಯಾನದ ರಾಜು ಗೊರೂರು, ಅರವಿಂದ್, ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ರಮೇಶ್ ಹಾಗು ಇತರರಿದ್ದರು.

ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸ್ ಬಿಗಿ ಭದ್ರತೆ ಒದಗಿಸಲಾಗಿತ್ತು. ರಸ್ತೆ ತಡೆಯಿಂದ ವಾಹನ ಸಂಚಾರದಲ್ಲಿ ಕೆಲ ಹೊತ್ತು ವ್ಯತ್ಯಯವಾಯಿತು. ತಾಲ್ಲೂಕು ಕೇಂದ್ರಗಳಲ್ಲೂ ಪ್ರತಿಭಟನೆಗಳು ನಡೆದವು. ನಗರದ ಹೇಮಾವತಿ ಪ್ರತಿಮೆಯಿಂದ ಮೆರವಣಿಗೆಯಲ್ಲಿ ಬಂದ ನೂರಾರು ಪ್ರತಿಭಟನಾಕಾರರು ಪ್ರಧಾನ ಅಂಚೆ ಕಚೇರಿ ಎದುರು ಬಹಿರಂಗ ಸಮಾವೇಶದ ಬಳಿಕ ಜಿಲ್ಲಾಧಿಕಾರಿ ಕಚೇರಿಗೆ ಮನವಿ ಸಲ್ಲಿಸಿದರು.

ಅಮೇರಿಕ ಜೊತೆಗಿನ ಒಪ್ಪಂದಕ್ಕೆ ವಿರೋಧ

ಪ್ರಧಾನಿ ನರೇಂದ್ರ ಮೋದಿ ಅವರು ಅಮೇರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜೊತೆಗೆ ಒಪ್ಪಂದ ಮಾಡಿರುವುದು ಅವೈಜ್ಞಾನಿಕ ನಿರ್ಧಾರವೆಂದು ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ಅವರು ಪ್ರತಿಪಾದಿಸಿದರು.

ಡೊನಾಲ್ಡ್ ಟ್ರಂಪ್ ಕೈಗೊಳ್ಳುತ್ತಿರುವ ನಿರ್ಧಾರಗಳು ವಿಶ್ವದೆಲ್ಲೆಡೆ ಟೀಕೆಗೆ ಗುರಿಯಾಗುತ್ತಿದೆ. ಭಾರತವು ಮಾಡಿಕೊಂಡಿರುವ ಆರ್ಥಿಕ ಒಪ್ಪಂದಿಂದ ಭವಿಷ್ಯದ ದೃಷ್ಟಿಯಿಂದ ಅಪಾಯಕಾರಿಯಾಗಿದೆ. ಅಮೇ ರಿಕದಿಂದ ಆಮದಾಗುವ ಕೃಷಿ ಉತ್ಪನ್ನಗಳಿಗೆ ತೆರಿಗೆ ಕಡಿತಗೊಳಿಸಿ ರುವುದರಿಂದ ನಮ್ಮ ವ್ಯವಸಾಯದ ಮೇಲೆ ಪರಿಣಾಮ ಬೀರುತ್ತದೆಂದು ಆತಂಕ ವ್ಯಕ್ತಪಡಿಸಿದರು.

ಸಾಲ ತೀರಿಸಲಾಗದೆ ಪತ್ನಿಗೆ ಹೊಡೆದ ಪತಿ

ಹಾಸನ: ತನ್ನ ಖಾಲಿ ಚೆಕ್‌ಗಳ ನೆರವಿನಿಂದ ಸಾಲ ಪಡೆದಿದ್ದಕ್ಕೆ ಆಕ್ರೋಶಗೊಂಡ ಪತ್ನಿ ಅದನ್ನು ಪ್ರಶ್ನಿಸಿದ್ದಕ್ಕೆ ಪತಿ ಮರದ ಬ್ಯಾಟ್‌ನಿಂದ ತಲೆಗೆ ಬಲವಾಗಿ ಹೊಡೆದು ಕೊಲೆಗೆ ಯತ್ನಿಸಿರುವ ಘಟನೆ ಸತ್ಯಮಂಗಲ ಬಡಾವಣೆ ಯಲ್ಲಿ ಬುಧವಾರ ನಡೆದಿದೆ.

ಇಂದ್ರಾ ನಗರದದಲ್ಲಿ ವಾಸವಿರುವ ಪುಷ್ಪ ಎಂಬುವವರ ಮೇಲೆ ಪತಿ ದೊರೆಸ್ವಾಮಿ ಹಲ್ಲೆ ಮಾಡಿದ್ದಾನೆ ಎನ್ನಲಾಗಿದೆ. ನಿರ್ದಿಷ್ಟ ದುಡಿಮೆ ಹಾಗು ಕುಟುಂಬದ ಜವಾಬ್ದಾರಿ ಇಲ್ಲದ ದೊರೆ ಸ್ವಾಮಿ ವಿಪರೀತ ಸಾಲ ಮಾಡಿ ಕೊಂಡಿ ದ್ದನು. ದಂಪ ತಿಗೆ ಇಬ್ಬರು ಮಕ್ಕಳಿದ್ದಾರೆ. ಕುಟುಂಬ ನಿರ್ವಹಣೆಗಾಗಿ ಪುಷ್ಪ ಅವರು ಗಾರ್ಮೆಂಟ್ಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಿ ಕೊಂಡಿದ್ದು, ದೊರೆಸ್ವಾಮಿಗೆ ಸತ್ಯಮಂಗಲ ಬಡಾವಣೆಯಲ್ಲಿ ಇಸ್ತ್ರಿ ಅಂಗಡಿ ಮಾಡಿಕೊಟ್ಟಿದ್ದಾರೆ.

ಆದರೆ, ದೊರೆಸ್ವಾಮಿಯ ಸಾಲದ ಹುಚ್ಚು ಕಡಿಮೆಯಾಗಿಲ್ಲ. ಹೆಂಡತಿಯ ಬ್ಯಾಂಕ್ ಚೆಕ್ ಕೊಟ್ಟುಭಾಗ್ಯ, ಲೋಕೇಶ್ ಎಂಬುವವರಿಂದ ಸಾಲ ಪಡೆದಿದ್ದ. ಅವರು ಹಣ ಕೇಳಲು ಮನೆಗೆ ಬಂದಿದ್ದಕ್ಕೆ ಆಕ್ರೋಶಗೊಂಡ ಪುಷ್ಪಾ, ಇಸ್ತ್ರಿ ಅಂಗಡಿ ಬಳಿ ತೆರಳಿ ಗಂಡನೊಂದಿಗೆ ವಾಗ್ವಾದ ಶುರು ಮಾಡಿದ್ದಾರೆ. ಇಬ್ಬರ ನಡುವೆ ವಾಕ್ಸಮರ ಜೋರಾಗಿ ದೊರೆಸ್ವಾಮಿ ಅಲ್ಲಿಯೇ ಇದ್ದ ಮರದ ಬ್ಯಾಟ್‌ನಿಂದ ತಲೆಗೆ ಬಲವಾಗಿ ಹೊಡೆದಿದ್ದಾನೆ. ಗಂಭೀರ ಗಾಯಗೊಂಡಿರುವ ಪುಷ್ಪ ಅವರನ್ನು ಹಿಮ್ಸ್‌ಗೆ ದಾಖಲಿಸಲಾಗಿದೆ. ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗುತ್ತಿಗೆ-ಹೊರಗುತ್ತಿಗೆ ನೌಕರರಿಗೆ ನೇರ ಪಾವತಿ ಜಾರಿಯಾಗಲಿ

• ಪ್ರಜೋದಯ ವರದಿ

ಹಾಸನ: ಸರ್ಕಾರದ ವಿವಿಧ ಇಲಾಖೆಯಡಿ ಗುತ್ತಿಗೆ-ಹೊರಗುತ್ತಿಗೆ ಆಧಾರದಡಿ ಕೆಲಸ ಮಾಡುತ್ತಿರುವವರಿಗೆ ವೇತನ ನೇರ ಪಾವತಿ ಜಾರಿಗಳಿಸುವುದು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಗುರುವಾರ ರಾಜ್ಯ ಸರ್ಕಾರಿ ಖಾಯಂಮೇತರ ನೌಕರರ ಒಕ್ಕೂಟದಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಒಕ್ಕೂಟದ ರಾಜ್ಯ ಕಾರ್ಯದರ್ಶಿ ಕಾಂತರಾಜು ಅವರು ಮಾತನಾಡಿ, ಸರ್ಕಾರಿ ಇಲಾಖೆ ಗಳಲ್ಲಿ ದುಡಿಯುತ್ತಿರುವ ಗುತ್ತಿಗೆ ಹಾಗು ಹೊರಗುತ್ತಿಗೆ ನೌಕರರು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದರೂ ಸೇವಾ ಭದ್ರತೆ, ಸಮಾನ ವೇತನ ಮತ್ತು ಮೂಲ ಸೌಲಭ್ಯಗಳಿಂದ ವಂಚಿತರಾಗಿರುವುದು ಅನ್ಯಾಯವೆಂದು ಆಕ್ರೋಶ ವ್ಯಕ್ತಪಡಿಸಿದರು.

ಉದಾರೀಕರಣ ನೀತಿಗಳ ಪರಿಣಾಮವಾಗಿ ಖಾಯಂ ಹುದ್ದೆಗಳ ರದ್ದತಿ ಹಾಗು ನೇಮಕಾತಿ ಸ್ಥಗಿತದಿಂದ ಹೆಚ್ಚಿನ ಕೆಲಸಗಳನ್ನು ಖಾಯಂ ಮೇತರ ನೌಕರರ ಮೇಲೆ ಹಾಕಲಾಗಿದೆ. ಆದರೆ, ಕನಿಷ್ಟ ವೇತನ, ಇಎಸ್‌ಐ, ಪಿಎಫ್ ಸೇರಿ ಕಾನೂನುಬದ್ಧ ಸೌಲಭ್ಯಗಳು ದೊರೆಯುತ್ತಿಲ್ಲ. ಸಮಾನ ಕೆಲಸಕ್ಕೆ ಸಮಾನ ವೇತನ ಎಂಬ ಸುಪ್ರೀಂ ಕೋರ್ಟ್ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿ ಮಾಡಬೇಕೆಂದು ಆಗ್ರಹಿಸಿದರು.

ಖಾಯಂಮೇತರ ನೌಕರರನ್ನು ಅನುಭವದ ಆಧಾರದಲ್ಲಿ ಖಾಯಂ ಮಾಡಲು ಕೆಸಿಎಸ್‌ಆರ್ ನಿಯಮಾವಳಿಗಳಿಗೆ ತಿದ್ದುಪಡಿ ತರಬೇಕು. ಕನಿಷ್ಟ ವೇತನ ಕಾಯ್ದೆಯಡಿ ಬರುವ ಎಲ್ಲಾ ನೌಕರರಿಗೆ ಸರ್ಕಾರದ ಅಧಿಸೂಚನೆಯಂತೆ ವೇತನ ಜಾರಿ ಮಾಡಬೇಕು. ಹೊರಗುತ್ತಿಗೆ ನೇಮಕಾತಿ ಪದ್ಧತಿಯನ್ನು ರದ್ದುಪಡಿಸಿ ನೇರಪಾವತಿ ವ್ಯವಸ್ಥೆ ಜಾರಿಗೆ ತರಬೇಕೆಂದು ಒತ್ತಾಯಿಸಿದರು.

ವೇತನ ಪರಿಷ್ಕರಣೆ ವಿಷಯದಲ್ಲಿ ಕೆಲ ಶಾಖೆಗಳಿಗೆ ನೀಡಿರುವ ಮಾದರಿಯನ್ನು ಎಲ್ಲಾ ಇಲಾಖೆಗಳ ಖಾಯಂ ಮೇತರ ನೌಕರರಿಗೂ ಅನ್ವಯಿಸಬೇಕು. ಮಹಿಳಾ ನೌಕರರಿಗೆ ವೇತನ ಸಹಿತ ಹೆರಿಗೆ ಹಾಗು ಮುಟ್ಟಿನ ರಜೆ ಜಾರಿ ಮಾಡಬೇಕೆಂದರು.

ಪ್ರತಿಭಟನೆಯಲ್ಲಿ ಗ್ರಾಮೀಣ ಕುಡಿಯುವ ನೀರು ನೈರ್ಮಲ್ಯ ವಿಭಾಗದ ಕಾರ್ತಿಕ್, ಸಂದೇಶ್, ಸಮಾಜ ಕಲ್ಯಾಣ ಇಲಾಖೆಯ ಪ್ರಕಾಶ್, ಸಂತೋಷ್, ಆಶಾ, ಮಹೇಶ್, ರಮ್ಯ, ದರ್ಶನ್ ಮತ್ತಿತರರಿದ್ದರು.

ಬಿತ್ತನೆ ಬೀಜ ಪರೀಕ್ಷಾ ಪ್ರಯೋಗಾಲಯ ನಿರ್ಮಾಣಕ್ಕೆ ಕೋರಿಕೆ

» ಮೊದಲನೇ ಪುಟದಿಂದ

ವರ್ಧಿತ ವಸತಿ ಮೂಲಭೂತ ಸೌಕರ್ಯ, ವಿಶೇಷವಾಗಿ ಗ್ರಾಮೀಣ ಮತ್ತು ಆರ್ಥಿಕವಾಗಿ ದುರ್ಬಲ ವಿದ್ಯಾರ್ಥಿಗಳಿಗೆ ಪ್ರಯೋಜನ ನೀಡು ತ್ತದೆ. ಹಾಗೆಯೇ ಗುಣಮಟ್ಟದ ಬೀಜವು ಸುಸ್ಥಿರ ಕೃಷಿ ಉತ್ಪಾದನೆಯ ಅಡಿಪಾಯವಾಗಿದೆ. ಬೀಜದಿಂದ ರೋಗ ಹರಡುವುದನ್ನು ತಡೆಯಲು ವೈಜ್ಞಾನಿಕ ಪರೀಕ್ಷೆ ಮೂಲಕ ಬೀಜದ ಆರೋಗ್ಯ ಖಚಿತ ಪಡಿಸಿಕೊಳ್ಳುವುದು ಬಹಳ ಮುಖ್ಯವೆಂದು ಸಚಿವರಿಗೆ ಮನವರಿಕೆ ಮಾಡಿಕೊಟ್ಟರು.

ರೋಗ ಮತ್ತು ಬೆಳೆ ಉತಾದಕತೆ ಉನ್ನತ ಗುಣಮಟ್ಟ ಕಾಪಾಡಿ ಕೊಳ್ಳಲು. ಹವಾಮಾನದ ಪ್ರಸ್ತುತ ಸನ್ನಿವೇಶದಲ್ಲಿ ಕೀಟಗಳು ಮತ್ತು ರೋಗಗಳ ಸಂಭವ ಹೆಚ್ಚುತ್ತಿದೆ ಮತ್ತು ಪ್ರಮಾಣೀಕೃತ ವಿಭಾಗಗಳಿಗೆ ಹೆಚ್ಚುತ್ತಿರುವ ಬೇಡಿಕೆ. ಸುಸಜ್ಜಿತ ಬೀಜ ಆರೋಗ್ಯ ಟೆಸ್ಟಿಂಗ್ ಪ್ರಯೋ ಗಾಲಯದ ಅವಶ್ಯಕತೆ ಇದೆ. ಪ್ರಸ್ತಾವಿತ ಪ್ರಯೋಗಾಲಯ ಬೀಜದಿಂದ ಹರಡುವ ರೋಗಕಾರಕಗಳನ್ನು ಪತ್ತೆಹಚ್ಚಲು, ಬೀಜದಮೌಲ್ಯಮಾಪನ ಸುಲಭಗೊಳಿಸುತ್ತದೆಂದು ಹೇಳಿದರು.

ರಾಷ್ಟ್ರೀಯ ಮಾನದಂಡಗಳಿಗೆ ಅನುಗುಣವಾಗಿ ಪ್ರಮಾಣೀಕರಣ ಬೆಂಬಲ ನೀಡುತ್ತದೆ. ಇದು ವಿದ್ಯಾರ್ಥಿಗಳು, ವಿಜ್ಞಾನಿಗಳು ಮತ್ತು ಕ್ಷೇತ್ರ ಕಾರ್ಯ ನಿರ್ವಾಹಕರಿಗೆ ತರಬೇತಿ ಮತ್ತು ಸಂಶೋಧನಾ ಸೌಲಭ್ಯವಾಗಿ ಕಾರ್ಯ ನಿರ್ವಹಿಸುತ್ತದೆ, ಇದರಿಂದಾಗಿ ಶೈಕ್ಷಣಿಕ ಮತ್ತು ವಿಸ್ತರಣಾ ಚಟುವಟಿಕೆ ಬಲಪಡಿಸಲು ಪ್ರಯೋಗಾಲಯ ಪ್ರಯೋಜ ನವಾಗಲಿದೆ ವಿಶ್ವಾಸಾರ್ಹ ಮತ್ತು ಸಮಯೋಚಿತ ಪರೀಕ್ಷೆ ಒದಗಿಸುವ ಮೂಲಕ ರೈತರು, ಬೀಜ ಉತ್ಪಾದಕರು ಮತ್ತು ಕೃಷಿ-ಉದ್ಯಮಿಗಳು ಬೀಜದ ಗುಣ ಮಟ್ಟ, ಈ ಉಪಕ್ರಮ ಬೆಳೆಗಳ ಇಳುವರಿ ಹೆಚ್ಚಿಸಲು, ರಾಷ್ಟ್ರೀಯ ಆಹಾರ ಭದ್ರತಾ ಉದ್ದೇಶ ಸುಧಾರಿಸಲು ಮತ್ತು ಬೆಂಬಲಿ ಸಲು ಗಣನೀಯವಾಗಿ ಕೊಡುಗೆ ನೀಡುತ್ತದೆ ಎಂದು ತಿಳಿಸಿದರು.

ಹೀಗಾಗಿ ಯುಎಎಸ್ ಮತ್ತು ಹಾಸನಕ್ಕೆ ಹಣ ಮಂಜೂರು ಮಾಡಬೇಕೆಂಬ ನನ್ನ ಮನವಿ ಪರಿಗಣಿಸಿ 6 ದಶಕಗಳಿಂದ ಈ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ನನ್ನ ಸ್ವಂತ ಊರಾದ ಹಾಸನದ ಕಾರೆಕೆರೆಯಲ್ಲಿ ಯುಜಿ ಬಾಲಕರು ಮತ್ತು ಬಾಲಕಿಯರ ಹಾಸ್ಟೆಲ್, ಬೀಜ ಆರೋಗ್ಯ ಪರೀಕ್ಷಾ ಪ್ರಯೋಗಾಲಯ ನಿರ್ಮಾಣಕ್ಕೆ ಹಣ ಬಿಡುಗಡೆಗೆ ಮನವಿ ಮಾಡಿದರು.

ಬೆಂಬಲ ಬೆಲೆಯಲ್ಲಿ ರಾಗಿ-ಭತ್ತ ಖರೀದಿಗೆ ಚಾಲನೆ

» ಮೊದಲನೇ ಪುಟದಿಂದ

5 ಎಕರೆಗೆ 50 ಕ್ವಿಂಟಾಲ್‌ವರೆಗೆ ರಾಗಿ ಮಾರಬಹುದು. ರಾಗಿ ಖರೀದಿಗೆ ಮಾರ್ಚ್ 31 ಕೊನೆಯ ದಿನಾಂಕವಾಗಿದ್ದು, ಅದಕ್ಕೂ ಮುನ್ನ ರೈತರು ಧಾನ್ಯ ಒಪ್ಪಿಸುವಂತೆ ಮನವಿ ಮಾಡಿದರು.

ರೈತರು ತಮ್ಮ ಎಫ್‌ಐಡಿ ಸಂಖ್ಯೆ ಹಾಗೂ ಆಧಾರ್ ಕಾರ್ಡ್ ನಕಲಿನೊಂದಿಗೆ ಸಂಬಂಧಪಟ್ಟ ನೋಂದಣಿ, ಖರೀದಿ ಕೇಂದ್ರಗಳಿಗೆ ಭೇಟಿ ನೀಡಿ ಬಯೋಮೆಟ್ರಿಕ್ ಮೂಲಕ ಎನ್‌ಐಸಿ-ಎಫ್‌ಸಿಎಸ್ ತಂತ್ರಾಂಶದಲ್ಲಿ ನೋಂದಣಿ ಮಾಡಿಸಬೇಕು. ನೋಂದಾಯಿತ ರೈತರಿಂದ ಮಾತ್ರ ರಾಗಿ, ಭತ್ತ ಹಾಗೂ ಕಿರುಸಿರಿಧಾನ್ಯಗಳನ್ನು ಖರೀದಿಸಲಾಗುತ್ತದೆ ಎಂದರು.

ನೋಂದಣಿ ಬಳಿಕ ಕಂಪ್ಯೂಟರ್ ರಶೀದಿ ಪಡೆಯುವುದು ಕಡ್ಡಾಯ. ಧಾನ್ಯ ಮಾರಾಟ ಮಾಡಿದ ತಕ್ಷಣ ಕಂಪ್ಯೂಟರ್ ಬಿಲ್ ಪಡೆಯಬೇಕೆಂದು ಸೂಚಿಸಲಾಗಿದೆ. ಯಾವುದೇ ಮಧ್ಯವರ್ತಿಗಳ ಮೂಲಕ ಧಾನ್ಯ ಮಾರಾಟ ಮಾಡಬಾರದು ಹಾಗೂ ತಮ್ಮ ದಾಖಲೆಗಳನ್ನು ಇತರರಿಗೆ ನೀಡಬಾರದೆಂದು ಎಚ್ಚರಿಕೆ ನೀಡಲಾಗಿದೆ. ಹಣವನ್ನು ರೈತರ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆ ಮೂಲಕ ಜಮಾ ಮಾಡಲಾಗುತ್ತದೆ. ಕಳಪೆ ಗುಣಮಟ್ಟದ ಧಾನ್ಯಗಳನ್ನು ಸ್ವೀಕರಿಸಲಾಗುವುದಿಲ್ಲ. ಸಾರ್ವಜನಿಕ ವಿತರಣೆ ವ್ಯವಸ್ಥೆಗೆ ಉತ್ತಮ ಗುಣಮಟ್ಟದ ಧಾನ್ಯ ಒದಗಿಸುವಂತೆ ರೈತರಿಗೆ ಮನವಿ ಮಾಡಿದರು. ವಿವಿಧ ಇಲಾಖೆ ಅಧಿಕಾರಿಗಳು ಹಾಗು ಎಪಿಎಂಸಿ ಮಾರುಕಟ್ಟೆಯ ಮಧು, ದೇವರಾಜು, ರಾಗಿ ಸಾಮಣ್ಣ, ಆನಂದ್ ಇದ್ದರು.

ನಂಜುಂಡಶೆಟ್ಟಿ ಸನ್ಸ್ ಅಂಡ್ ಹೋಂ ಅಪ್ಲೆಯನ್ಸಸ್‌ಗೆ ದಂಡ

• ಪ್ರಜೋದಯ ವರದಿ

ಹಾಸನ: ವಾರೆಂಟಿ ಇದ್ದರೂ ಮಿಕ್ಸಿ ರಿಪೇರಿ ಮಾಡಿಕೊಡದ ಹಾಗು ಹೊಸ ಮಿಕ್ಸಿ ಕೊಡದ ಕಂಪನಿಗೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ ದಂಡ ವಿಧಿಸಿದೆ. ಐದು ಸಾವಿರ ರೂ. ಮೊತ್ತದ ಮಿಕ್ಸಿಗಾಗಿ ವ್ಯಕ್ತಿ ನಡೆಸಿದ 15 ತಿಂಗಳ ಹೋರಾಟ ಇತ್ಯರ್ಥವಾಗಿದೆ.

ನಗರದ ನಟರಾಜ ಎಂಬುವವರು ನಗರದ ಹೆಚ್.ಎನ್. ನಂಜುಂಡಶೆಟ್ಟಿ ಸನ್ಸ್ ಅಂಡ್ ಹೋಂ ಅಪ್ಲೆಯನ್ಸಸ್ ವಿರುದ್ಧ ದೂರು ಸಲ್ಲಿಸಿ ದ್ದರು. 2024ರ ನ.19ರಂದು 4,900 ರೂ. ಪಾವತಿಸಿ ವಿ ಗಾರ್ಡ್ ಕಂಪನಿಯ ಮಿಕ್ಸಿ ಖರೀದಿಸಿದ್ದರು. 5 ವರ್ಷ ವಾರೆಂಟಿಯ ಮಿಕ್ಸಿ ಮೂರು ತಿಂಗಳಲ್ಲಿ ದುರಸ್ತಿಗೀಡಾಗಿತ್ತು. ನಟರಾಜ ಅವರು ರಿಪೇರಿಗಾಗಿ ಹೋಂ ಅಪ್ಲೆಯನ್ಸಸ್‌ಗೆ ತೆರಳಿದಾಗ ಸಿದ್ದಗಂಗಾ ಸರ್ವಿಸ್ ಸೆಂಟರ್‌ನಲ್ಲಿ ರಿಪೇರಿ ಮಾಡಿಸಿಕೊಡಲಾಗಿತ್ತು. ಆದರೆ, ನಾಲ್ಕು ತಿಂಗಳಲ್ಲಿ ಅದೇ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಮತ್ತೊಮ್ಮೆ ಬಂದಾಗ ಅಪ್ಲೆಯನ್ಸಸ್‌ನವರು ಸಕಾರಾತ್ಮಕ ವಾಗಿ ಸ್ಪಂದಿಸಿರಲಿಲ್ಲ. ಅದರಿಂದ ಬೇಸತ್ತ ನಟರಾಜ ಅವರು ಸೇವಾ ನ್ಯೂನ್ಯತೆ ಉಂಟಾಗಿದೆ ಎಂದು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ 2025ರ ನ.13 ರಂದು ದೂರು ಸಲ್ಲಿಸಿದ್ದರು.

ಆಯೋಗ ನಡೆಸಿದ ವಿಚಾರಣೆಯಲ್ಲಿ ಮಾರಾಟ ಕಂಪನಿಯು ತಮ್ಮಿಂದ ಯಾವುದೇ ಲೋಪ ಉಂಟಾಗಿಲ್ಲವೆಂದು ಸಮರ್ಥಿಸಿ ಕೊಂಡಿತ್ತು. ಆದರೆ, ರಿಪೇರಿ ಜವಾಬ್ದಾರಿ ವಹಿಸಿಕೊಂಡಿದ್ದವರು ನೋಟೀಸ್‌ಗೆ ಹಾಜರಾಗದ ಕಾರಣ ಪ್ರಕರಣವನ್ನು ಏಕಪಕ್ಷೀಯ ವಾಗಿ ತೀರ್ಮಾನಿಸಲಾಯಿತು.

ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಸಿ. ಎಂ.ಚಂಚಲ, ಸದಸ್ಯೆ ಆರ್.ಅನುಪಮ ಅವರ ಪೀಠವು ಪ್ರಕರಣದ ವಿಚಾರಣೆ ನಡೆಸಿ 45 ದಿನಗಳೊಳಗೆ ಅದೇ ಬ್ರಾಂಡ್‌ನ ಹೊಸ ಮಿಕ್ಸಿ ಅಥವಾ ಅದರ ಮೊತ್ತ ಪಾವತಿಸಬೇಕು. ಸೇವಾ ನ್ಯೂನ್ಯತೆಗಾಗಿ 2 ಸಾವಿರ ರೂ., ಮಾನಸಿಕ ಹಿಂಸೆಗಾಗಿ 1 ಸಾವಿರ ರೂ. ಮತ್ತು ಫಿರ್ಯಾದಿ ಶುಲ್ಕ 1 ಸಾವಿರ ರೂ. ನೀಡಬೇಕೆಂದು ಆದೇಶಿಸಿದೆ.

ಪ್ರೀತಮ್ ಗೌಡರನ್ನು ಕಾಂಗ್ರೆಸ್‌ಗೆ ಕಳುಹಿಸಲು ಜೆಡಿಎಸ್ ಪ್ರಯತ್ನ

» ಮೊದಲನೇ ಪುಟದಿಂದ

ಪ್ರೀತಮ್ ಗೌಡ ಅವರು ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಪಕ್ಷ ಸಂಘಟನೆ ಮಾಡುತ್ತಿದ್ದಾರೆ. ಜೆಡಿಎಸ್‌ಗೆ ಎದುರಾಳಿಯಾಗಿ ಅವರು ಬೆಳೆಯುತ್ತಿದ್ದಾರೆಂದು ವ್ಯವಸ್ಥಿತ ಷಡ್ಯಂತ್ರ ನಡೆಯುತ್ತಿದೆ. ಲೋಕಸಭೆ ಚುನಾವಣೆಯಲ್ಲಿ ಮೈತ್ರಿ ಅಭ್ಯರ್ಥಿ ಸೋಲಿಗೆ ಪ್ರೀತಮ್ ಗೌಡ ಕಾರಣವೆಂದು ಆರೋಪಿಸುವುದು ಸರಿಯಲ್ಲ. ಮಾಜಿ ಶಾಸಕರಾಗಿ ಅವರು ತಮ್ಮ ಶಕ್ತ್ಯಾನುಸಾರ ಮತ ಕೊಡಿಸಿದ್ದಾರೆ. ಆದರೆ, ಜೆಡಿಎಸ್ ಶಾಸಕರಿರುವ ಹೊಳೆನರಸೀಪುರದಲ್ಲಿ ಕಾಂಗ್ರೆಸ್ 17 ಸಾವಿರ, ಹಾಸನದಲ್ಲಿ 20 ಸಾವಿರ ಹಾಗು ಅರಕಲಗೂಡು ಕ್ಷೇತ್ರದಲ್ಲಿ 19 ಸಾವಿರ ಅಧಿಕ ಮತ ಪಡೆಯಲು ಹೇಗೆ ಸಾಧ್ಯವಾಯಿತು. ಜೆಡಿಎಸ್ ಶಾಸಕರೇ ಪ್ರಜ್ವಲ್ ಸೋಲಿಗೆ ಕಾರಣ ಎನ್ನಲು ಆಗುತ್ತದೆಯೇ ಎಂದು ಪ್ರಶ್ನಿಸಿದರು.

ಪ್ರೀತಮ್ ಅವರ ಏಳಿಗೆ ಸಹಿಸದೆ ಜೆಡಿಎಸ್‌ನವರು ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ಕಾಂಗ್ರೆಸ್ ಸೇರುವ ಗ್ರಹಚಾರ ಏನೂ ಬಂದಿಲ್ಲ. ಜೆಡಿಎಸ್ ನವರೇ ಕಾಂಗ್ರೆಸ್‌ಗೆ ಕಳುಹಿಸಲು ಹೊರಟಿದ್ದಾರೆ. ಇದೇ ತಂತ್ರಗಾರಿಕೆಯಿಂದ ಚನ್ನಪಟ್ಟಣದಲ್ಲಿ ಸಿ.ಪಿ.ಯೋಗೇಶ್ವರ್‌ಗೆ ಟಿಕೆಟ್ ತಪ್ಪಿಸಿ ಕಾಂಗ್ರೆಸ್‌ಗೆ ಕಳುಹಿಸಿದರು. ಪ್ರೀತಮ್‌ಗೆ ಟಿಕೆಟ್ ಸಿಗುವುದಿಲ್ಲವೆಂದು ನಿಮಗೆ ಯಾವ ಜ್ಯೋತಿಷಿ, ಗಿಳಿ ಶಾಸ್ತ್ರದವರು ಹೇಳಿದ್ದಾರೆಂದು ತರಾಟೆಗೆ ತೆಗೆದುಕೊಂಡ ಅವರು, 2028ರಲ್ಲಿ ಹಾಸನ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪ್ರೀತಮ್ ಗೌಡರೇ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜಿಲ್ಲೆಯಲ್ಲಿ ಬಿಜೆಪಿ ಪ್ರಬಲವಾಗಿಲ್ಲ ಎಂದು ಅಪಪ್ರಚಾರ ಮಾಡಲಾಗುತ್ತಿದೆ. ಬೇಲೂರಿನಲ್ಲಿ ಕೆ.ಎಸ್.ಲಿಂಗೇಶ್ ವಿರುದ್ಧ ಗೆದ್ದಿರುವುದು ಬಿಜೆಪಿ ಅಭ್ಯರ್ಥಿ ಅಲ್ಲವೇ. ಜೆಡಿಎಸ್ ಜಿಲ್ಲಾಧ್ಯಕ್ಷರು ವಾಸ್ತವ ತಿಳಿದು ಮಾತನಾಡಬೇಕು. ಮೈತ್ರಿ ಪಕ್ಷದಿಂದ ತಮಗೆ ಟಿಕೆಟ್ ಸಿಗುತ್ತದೆಂಬ ಭ್ರಮೆಯಲ್ಲಿ ಲಿಂಗೇಶ್ ಇದ್ದಾರೆ. ಒಂದು ವೇಳೆ ಟಿಕೆಟ್ ಕೈ ತಪ್ಪಿದರೆ ಏನು ಮಾಡುತ್ತಾರೆಂಬುದು ಕುತೂಹಲ ಮೂಡಿಸಿದೆ ಎಂದರು.

ಬಿಜೆಪಿ ನಗರಾಧ್ಯಕ್ಷ ಯೋಗೇಶ್, ನಗರಸಭೆ ಮಾಜಿ ಅಧ್ಯಕ್ಷ ಮೋಹನ್, ಗ್ರಾಮಾಂತರ ಮಂಡಲ ಅಧ್ಯಕ್ಷ ಲಕ್ಷ್ಮೀಶ್, ಹುಡಾ ಮಾಜಿ ಅಧ್ಯಕ್ಷ ಲಲಾಟಮೂರ್ತಿ ಹಾಜರಿದ್ದರು.

ಗಣಿಗಾರಿಕೆ ಮೇಲೆ ದಾಳಿ: ಮರಳು ವಶ

• ಪ್ರಜೋದಯ ವರದಿ

ಸಕಲೇಶಪುರ: ತಾಲ್ಲೂಕಿನ ಹೆನ್ನಲಿ ಗ್ರಾಮದಲ್ಲಿ ಅಕ್ರಮವಾಗಿ ಮರಳು ಶೇಖರಣೆ ಮಾಡ ಲಾಗುತ್ತಿದೆ ಎಂಬ ಖಚಿತ ಮಾಹಿತಿಯ ಮೇರೆಗೆ ತಹಶೀಲ್ದಾರ್ ಸುಪ್ರೀತಾ ಅವರ ನೇತೃತ್ವದಲ್ಲಿ ಕಂದಾಯ ಹಾಗೂ ಪೊಲೀಸ್ ಅಧಿಕಾರಿಗಳ ತಂಡ ದಾಳಿ ನಡೆಸಿ ಏಳು ಟಿಪ್ಪರ್ ಮರಳನ್ನು ವಶಪಡಿಸಿಕೊಂಡ ಘಟನೆ ನಡೆದಿದೆ.

ತಾಲ್ಲೂಕಿನ ವಿವಿಧೆಡೆ ಅಕ್ರಮ ಮರಳು ಗಣಿಗಾರಿಕೆ ನಡೆಯುತ್ತಿದೆ ಎಂಬ ಸಾರ್ವಜನಿಕ ದೂರುಗಳ ಹಿನ್ನಲೆಯಲ್ಲಿ ಅಧಿಕಾರಿಗಳು ಕಾರ್ಯಾಚರಣೆ ನಡೆಸಿದರು. ಸ್ಥಳದಲ್ಲಿ ಅಕ್ರಮವಾಗಿ ಶೇಖರಿಸಿದ್ದ ಮರಳನ್ನು ವಶಕ್ಕೆ ಪಡೆದು ತಾಲ್ಲೂಕು ಕಚೇರಿ ಸಮೀಪ ಸುರಿಯಲಾಗಿದೆ.

ತಹಶೀಲ್ದಾರ್ ಸುಪ್ರೀತಾ ಅವರು ಮಾತನಾಡಿ, ಸರ್ಕಾರದ ಅನುಮತಿ ಇಲ್ಲದೆ ಮರಳು ಶೇಖರಣೆ ಮಾಡುವುದು ಕಾನೂನು ಬಾಹಿರವಾಗಿದ್ದು, ಇಂತಹ ಚಟುವಟಿಕೆಗಳಲ್ಲಿ ತೊಡಗಿ ರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು.

ಅಲ್ಲದೆ ಅಕ್ರಮವಾಗಿ ಪಡೆದುಕೊಂಡ ಮರಳನ್ನು ಬಳಸಿ ಕಟ್ಟಡ ಕಾಮಗಾರಿ ನಡೆಸುತ್ತಿ ರುವುದು ಕಂಡುಬಂದರೆ, ಸಂಬಂಧಿಸಿದ ಕಟ್ಟಡ ಮಾಲೀಕರ ಮೇಲೆಯೂ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.

ನಗರ ಪೊಲೀಸ್ ಇನ್ಸ್‌ಪೆಕ್ಟರ್ ವನರಾಜು, ಕಂದಾಯ ನಿರೀಕ್ಷಕ ದಾನ್ ಪ್ರಕಾಶ್ ಹಾಗೂ ಗ್ರಾಮಾಧಿಕಾರಿ ಶಿಲ್ಪ ಸೇರಿ ಸಿಬ್ಬಂದಿ ಪಾಲ್ಗೊಂಡಿದ್ದರು.

ಎತ್ತಿನಹೊಳೆ ಯೋಜನೆ: ಭೂಮಿ ನೀಡದ ರೈತನಿಗೂ 42 ಲಕ್ಷ ರೂ. ಪರಿಹಾರ

• ಪ್ರಜೋದಯ ವರದಿ

ಹಾಸನ: ಎತ್ತಿನಹೊಳೆ ಯೋಜನೆಗೆ ಭೂಮಿ ನೀಡಿದ ರೈತರಿಗೆ ನೀಡಬೇಕಿದ್ದ ಸುಮಾರು 42 ಲಕ್ಷ ರೂ. ಪರಿಹಾರವನ್ನು ನಕಲಿ ದಾಖಲೆ ಸೃಷ್ಟಿಸಿದ ಪ್ರಭಾವಿ ವ್ಯಕ್ತಿಗೆ ಮಂಜೂರು ಮಾಡುವ ಮೂಲಕ ಅಧಿಕಾರಿಗಳು ಲೋಪವೆಸಗಿದ್ದಾರೆಂದು ತಾಲ್ಲೂಕು ಬೆಟ್ಟದ ಆಲೂರು ಗ್ರಾಮದ ಲೋಹಿತ್ ಕುಮಾರ್ ಅವರು ಗಂಭೀರ ಆರೋಪ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಬೆಟ್ಟದ ಆಲೂರು ಗ್ರಾಮದ 10 ಕುಟುಂಬಗಳಿಗೆ ದಶಕಗಳ ಹಿಂದೆ ಗೋಮಾಳ ಜಾಗ ಜಮೀನು ಮಂಜೂರಾಗಿದೆ. ನಮಗೆ ಸಾಗುವಳಿ ಚೀಟಿ ನೀಡಲಾಗಿದೆಯಾದರೂ ಪಹಣಿ ಮಾಡಿಕೊಟ್ಟಿಲ್ಲ. ದಶಕಗಳಿಂದ ನಾವು ಸ್ವಾಧೀ ನಲ್ಲಿದ್ದೇವೆ. 2017-18ರಲ್ಲಿ ಎತ್ತಿನ ಹೊಳೆ ಕಾಲುವೆ ಅಳವಡಿಸುವಾಗ ಸಾಗುವಳಿ ಚೀಟಿ ಆಧಾರದಡಿ ಬೆಳೆ ಪರಿಹಾರ ನೀಡಿದ್ದಾರೆ. ಆದರೆ, ಶಾಶ್ವತ ಪರಿಹಾರ ಕಲ್ಪಿಸಿಲ್ಲವೆಂದರು.

ಕಾನೂನು ಪ್ರಕಾರ ಭೂ ಪರಿಹಾರ ಪಡೆಯಲು ಪಹಣಿ ಇರಬೇಕು. ನಮ್ಮ ಹೆಸರಿಗೆ ಪಹಣಿ ಮಾಡಿಕೊಡುವಂತೆ ತಾಲ್ಲೂಕು ಕಚೇರಿಗೆ ಭೇಟಿ ನೀಡಿದಾಗ ಅಧಿಕಾರಿಗಳು ಸ್ಪಂದಿಸಲಿಲ್ಲ. ಯೋಜನೆಗೆ ನೀಡಿರುವ ನನ್ನ 25 ಗುಂಟೆಗೆ 12 ಲಕ್ಷ ರೂ. ಪರಿಹಾರ ಕೊಡಬೇಕು. ಅದೇ ರೀತಿ ಉಳಿದ 9 ರೈತರಿಗೆ ಅನ್ಯಾಯವಾಗಿದೆ. ಅಂದಾಜು 42 ಲಕ್ಷ ರೂ. ಗಳನ್ನು ಗ್ರಾಮದ ರವಿ ಕುಮಾರ್ ಎಂಬಾತ ನಕಲಿ ದಾಖಲೆಗಳ ಸೃಷ್ಟಿಸಿ ಪಡೆದಿದ್ದಾನೆ. ಮೂಲ ಸ್ಕೆಚ್‌ನಲ್ಲಿ ಎತ್ತಿನ ಹೊಳೆ ಯೋಜನೆಗೆ ನಮ್ಮ ಭೂಮಿ ಬಳಸಿಕೊಳ್ಳಲಾಗಿದೆಯಾ ದರೂ ನಕಲಿ ದಾಖಲೆಗಳಲ್ಲಿ ನಮ್ಮ ಭೂಮಿಯನ್ನು ತೋರಿಸಿಲ್ಲ. ಹೀಗೆ ನಕಲಿ ದಾಖಲೆ ಸೃಷ್ಟಿಸಿ ವ್ಯಕ್ತಿಗೆ ಪರಿಹಾರ ಬಿಡುಗಡೆ ಮಾಡಿರುವುದು ಖಂಡನೀಯ ಎಂದರು.

ವಾಸ್ತವವಾಗಿ ರವಿಕುಮಾರ್ ಎಂಬುವವರ ಜಮೀನು ಯೋಜನೆ ವ್ಯಾಪ್ತಿಗೆ ಸೇರಿಲ್ಲ. ಕಾಮಗಾರಿ ಸಂಬಂಧಿತ ಸಾಮಾಗ್ರಿ ಇರಿಸಲು ಶೆಡ್ ನಿರ್ಮಾಣಕ್ಕೆ ಅವರ ಜಾಗ ಬಳಸಿಕೊಳ್ಳ ಲಾಗಿತ್ತು ಎಂದು ಸುಳ್ಳು ಹೇಳಿ ಪ್ರತಿವರ್ಷ ಅದಕ್ಕೂ ಬಾಡಿಗೆ ಪಡೆದಿ ದ್ದಾನೆ. ಇಷ್ಟು ಮಾತ್ರವಲ್ಲದೆ ಯೋಜನೆಗೆ ತಮ್ಮದೂ ಜಾಗ ಬಳಕೆ ಯಾಗಿದೆಯೆಂದು ಸುಳ್ಳು ದಾಖಲೆ ಸೃಷ್ಟಿಸಿ ನೈಜ ಫಲಾನುಭವಿಗಳ ಪರಿ ಹಾರಕ್ಕೆ ಕನ್ನ ಹಾಕಿದ್ದಾನೆ. ಅಧಿಕಾರಿ ಗಳು ಸಹ ನಮ್ಮ ಮನವಿಗೆ ಸ್ಪಂದಿ ಸುತ್ತಿಲ್ಲ. ಜಿಲ್ಲಾಡಳಿತ ಇನ್ನಾದರೂ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಸ್ಥಳ ಸಮೀಕ್ಷೆ ಮಾಡಿ ಅರ್ಹರಿಗೆ ಪರಿಹಾರ ಕಲ್ಪಿಸಬೇಕೆಂದು ಆಗ್ರಹಿಸಿದರು.

ಬೆಟ್ಟದ ಆಲೂರು ಗ್ರಾಮದ ಧರ್ಮೇಶ್, ಶಶಿ, ಮಂಜಯ್ಯ, ಪಾರ್ವತಮ್ಮ, ಪುಟ್ಟನಾಯಕ ಇದ್ದರು.

ಪ್ರತ್ಯೇಕ ಅಪಘಾತದಲ್ಲಿ ಇಬ್ಬರ ಸಾವು

ಹಾಸನ: ಜಿಲ್ಲೆಯ ಹಳೇಬೀಡು ಹಾಗು ದುದ್ದ ಠಾಣೆ ವ್ಯಾಪ್ತಿಯಲ್ಲಿ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಇಬ್ಬರು ಮೃತಪಟ್ಟಿರುವ ಘಟನೆ ನಡೆದಿದೆ.

ಬೀಗರ ಔತಣ ಮುಗಿಸಿಕೊಂಡು ರಸ್ತೆ ಬದಿ ಕಾಲ್ನಡಿಗೆಯಲ್ಲಿ ಹೋಗುತ್ತಿದ್ದ ವ್ಯಕ್ತಿಗೆ ಹಿಂದಿನಿಂದ ಬಂದ ಬೈಕ್ ಸವಾರ ಡಿಕ್ಕಿ ಮಾಡಿ ವ್ಯಕ್ತಿ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಬಸವಾಪಟ್ಟ ಕೆರೆ ಏರಿ ಮೇಲೆ ನಡೆದಿದೆ. ಗಂಡಸಿ ಹೋಬಳಿ ರಾಜಿಹಳ್ಳಿ ಗ್ರಾಮದ ಶಿವಸ್ವಾಮಿ ಮೃತರು.

ಬಿ.ಬೈರಾಪುರ ಗ್ರಾಮದ ಮಾರ್ಗದಮ್ಮ ದೇವಸ್ಥಾನದಲ್ಲಿ ಊಟ ಮುಗಿಸಿ ಹೋಗುತ್ತಿದ್ದಾಗ ಬಾಗೇಶಪುರ ಕಡೆಯಿಂದ ವೇಗವಾಗಿ ಬಂದ ಬೈಕ್ ಸವಾರ ಡಿಕ್ಕಿ ಮಾಡಿದ್ದಾನೆ. ತಲೆಗೆ ಬಲ ವಾದ ಏಟು ಬಿದ್ದ ಅವರನ್ನು ತಕ್ಷಣವೇ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ದುದ್ದ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಬೈಕ್‌ಗಳ ಮುಖಾಮುಖಿ ಡಿಕ್ಕಿಯಲ್ಲಿ ಒಬ್ಬ ಮೃತಪಟ್ಟಿರುವ ಘಟನೆ ಬೇಲೂರು ತಾಲ್ಲೂಕು ಹಗರೆಯಲ್ಲಿ ನಡೆದಿದೆ. ಮಾದಿಹಳ್ಳಿ ಹೋಬಳಿ ಅಂಗಡಿಹಳ್ಳಿ ಗ್ರಾಮದ ಅಮಿತ್ ಮೃತರು. ಗ್ರಾಮದ ಅನುಮಿಲ್ಲಿ ಹೋಟೆಲ್ ಮುಂದೆ ಹೋಗುತ್ತಿದ್ದಾಗ ಹಿಂದಿನಿಂದ ಬಂದ ಬೈಕ್ ಡಿಕ್ಕಿಯಾಗಿದೆ. ಗಂಭೀರ ಗಾಯ ಗೊಂಡಿದ್ದ ಅವರಿಗೆ ಮೈಸೂರಿನ ಅಪೋಲೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಬಳಿಕ ಹಿಮ್ಸ್‌ಗೆ ದಾಖಲಿಸಲಾಗಿತ್ತು.

ಕಾರ್ಮಿಕ ಸಂಹಿತೆ ವಿರೋಧಿಸಿ ಬೇಲೂರಿನಲ್ಲಿ ಬೃಹತ್ ಪ್ರತಿಭಟನೆ

• ಪ್ರಜೋದಯ ವರದಿ

ಬೇಲೂರು: ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನಾಲ್ಕು ನೂತನ ಕಾರ್ಮಿಕ ಸಂಹಿತೆಗಳನ್ನು ರದ್ದುಪಡಿಸುವಂತೆ ಆಗ್ರಹಿಸಿ, ಅಖಿಲ ಭಾರತ ಸಾರ್ವತ್ರಿಕ ಮುಷ್ಕರದ ಅಂಗವಾಗಿ ಪಟ್ಟಣದಲ್ಲಿ ವಿವಿಧ ಕಾರ್ಮಿಕ ಮತ್ತು ನೌಕರರ ಸಂಘಟನೆಗಳ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.

ಪಟ್ಟಣದ ಅಂಬೇಡ್ಕರ್ ವೃತ್ತದಿಂದ ಮೆರವಣಿಗೆ ಆರಂಭಗೊಂಡು ಅಂಗನವಾಡಿ ಕಾರ್ಯ ಕರ್ತೆಯರು, ಆಶಾ ಕಾರ್ಯಕರ್ತೆಯರು, ಬಿಸಿಯೂಟ ನೌಕರರು ಸೇರಿ ಕಾರ್ಯಕರ್ತೆಯರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಅಂಚೆ ಕಚೇರಿ (ಆವರಣ) ಮುಂಭಾಗ ಜಮಾಯಿಸಿ ಮುತ್ತಿಗೆ ಹಾಕಿದರು. ಕೆಲಕಾಲ ತೀವ್ರ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು.

ಬಿಸಿಯೂಟ ನೌಕರರ ಸಂಘದ ಅಧ್ಯಕ್ಷರಾದ ಮಂಜುಳಾ ಮಾತನಾಡಿ, ಕೇಂದ್ರ ಸರ್ಕಾರವು ಕಾರ್ಮಿಕರ ಹಿತ ಕಾಪಾಡುತ್ತಿದ್ದ 29 ಕಾರ್ಮಿಕ ಕಾಯ್ದೆಗಳನ್ನು ರದ್ದು ಮಾಡಿ, ಮಾಲೀಕರ ಪರವಾದ ನಾಲ್ಕು ಹೊಸ ಸಂಹಿತೆಗಳನ್ನು ಜಾರಿಗೆ ತಂದಿದೆ. ರಾಜ್ಯ ಸರ್ಕಾರವೂ ಅದಕ್ಕೆ ಬೆಂಬಲ ನೀಡುತ್ತಿರುವುದು ಖಂಡನೀಯ. ಈ ಸಂಹಿತೆಗಳು ಜಾರಿಯಾದರೆ ಕಾರ್ಖಾನೆ ಕಾರ್ಮಿಕರು, ಸ್ಕೀಮ್ ನೌಕರರು ಹಾಗೂ ಗ್ರಾಮ ಪಂಚಾಯಿತಿ ಸಿಬ್ಬಂದಿಗೆ ತೀವ್ರ ಅನ್ಯಾಯವಾಗಲಿದೆ. ಇದು ಖಾಸಗೀಕರಣಕ್ಕೆ ದಾರಿ ಮಾಡಿಕೊಡುವ ಕ್ರಮವೆಂದು ಆರೋಪಿಸಿದರು.

ಐಸಿಡಿಎಸ್ ಯೋಜನೆಗೆ 50 ವರ್ಷಗಳು ಪೂರ್ಣಗೊಂಡರೂ ಅಂಗನವಾಡಿ ಹಾಗೂ ಬಿಸಿಯೂಟ ನೌಕರರ ಬದುಕು ಸ್ಥಿರವಾಗಿಲ್ಲ. ಕೇಂದ್ರ ಸರ್ಕಾರ ಅಂಗನವಾಡಿ ನೌಕರರಿಗೆ ಕೇವಲ 2000-4000 ರೂ. ಮತ್ತು ಬಿಸಿಯೂಟ ನೌಕರರಿಗೆ ಅತ್ಯಲ್ಪ ಗೌರವಧನ ನೀಡುತ್ತಿದ್ದು, ಇದು ಶೋಷಣೆಯೇ ಸರಿ. ಕಾರ್ಮಿಕ ಸಂಹಿತೆಗಳನ್ನು ವಾಪಸ್ ಪಡೆಯುವವರೆಗೂ ಹೋರಾಟ ನಿಲ್ಲುವುದಿಲವೆಂದು ಎಚ್ಚರಿಸಿದರು.

ಅಂಗನವಾಡಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷರಾದ ಕಾಮಾಕ್ಷಿರಾಜ್ ಮಾತನಾಡಿ, ಹಿಂದೆ ಹೋರಾಟಗಳ ಮೂಲಕ ಕಾರ್ಮಿಕ ವಿರೋಧಿ ಕ್ರಮಗಳನ್ನು ತಡೆಹಿಡಿಯಲಾಗಿತ್ತು. ಈಗ ಕೇಂದ್ರ ಸರ್ಕಾರ ಏಕಾಏಕಿ ಸಂಹಿತೆಗಳನ್ನು ಜಾರಿಗೆ ತರುತ್ತಿದೆ. ರಾಜ್ಯ ಸರ್ಕಾರವೂ ಅದನ್ನೇ ಅನುಸರಿಸುತ್ತಿರುವುದು ದುರಂತ. ದೇಶಾದ್ಯಂತ ಎಲ್ಲಾ ಕಾರ್ಮಿಕ ಸಂಘಟನೆಗಳು ಒಗ್ಗೂಡಿ ಹೋರಾಟ ನಡೆಸುತ್ತಿವೆ. ಸರ್ಕಾರ ಕೂಡಲೇ ಸಂಹಿತೆಗಳನ್ನು ವಾಪಸ್ ಪಡೆಯಬೇಕು. ಇಲ್ಲವಾ ದಲ್ಲಿ ಮುಂದಿನ ದಿನಗಳಲ್ಲಿ ಹೋರಾಟ ಅನಿವಾರ್ಯವೆಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಮಹಿಳಾ ಒಕ್ಕಲಿಗರ ಸಂಘದ ಅಧ್ಯಕ್ಷೆ ಭಾರತಿಗೌಡ, ವಿವಿಧ ಸಂಘಟನೆಗಳ ಮುಖಂಡರು ಹಾಗು ಇತರರು ಭಾಗವಹಿಸಿದ್ದರು.

ಕೇಂದ್ರ-ರಾಜ್ಯ ಸರ್ಕಾರದ ಜನವಿರೋಧಿ ನೀತಿ ವಿರುದ್ಧ ಪ್ರತಿಭಟನೆ

• ಪ್ರಜೋದಯ ವರದಿ

ಸಕಲೇಶಪುರ: ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆಸಿಟಿಯು), ಸಂಯುಕ್ತ ಹೋರಾಟ ಕರ್ನಾಟಕ (ಎಸ್‌ಎಚ್‌ಕೆ) ಹಾಗೂ ಹಾಸನ ಜಿಲ್ಲಾ ಜನಪರ ಚಳುವಳಿಗಳ ಒಕ್ಕೂಟದ ನೇತೃತ್ವದಲ್ಲಿ ಗುರುವಾರ ನಡೆದ ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ಬೆಂಬಲವಾಗಿ ಸಕಲೇಶ ಪುರದಲ್ಲಿ ರಸ್ತೆ ತಡೆ, ಪಿಕೆಟಿಂಗ್ ಹಾಗೂ ಪ್ರತಿಭಟನೆ ಮೆರವಣಿಗೆ ನಡೆಸಿದರು.

ಹೇಮಾವತಿ ಪ್ರತಿಮೆ ಬಳಿಯಿಂದ ಹಳೆ ಬಸ್ ನಿಲ್ದಾಣದವರೆಗೆ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನವಿರೋಧಿ ನೀತಿಗಳ ವಿರುದ್ಧ ಘೋಷಣೆ ಕೂಗಿದರು. ರಾಷ್ಟ್ರೀಯ ಹೆದ್ದಾರಿ ತಡೆದು, ಕೇಂದ್ರ ಸರ್ಕಾರದ ಅಧೀನದಲ್ಲಿರುವ ಅಂಚೆ ಇಲಾಖೆ ಕಚೇರಿಗೆ ಪಿಕೆಟಿಂಗ್ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಮುಖಂಡರು, ನಾಲ್ಕು ಕರಾಳ ಕಾರ್ಮಿಕ ಸಂಹಿತೆಗಳನ್ನು ಹಿಂಪಡೆಯಬೇಕು. ವಿದ್ಯುಚ್ಛಕ್ತಿ ತಿದ್ದುಪಡಿ, ಬೀಜ ಮಸೂದೆ, ಭೂಸ್ವಾಧೀನ ಕಾಯ್ದೆ ಸೇರಿ ಜನವಿರೋಧಿ ಮಸೂದೆಗಳನ್ನು ರದ್ದುಗೊಳಿಸಬೇಕು. ವಿಮಾ ತಿದ್ದುಪಡಿ ಕಾಯ್ದೆ ಹಾಗೂ ಶಾಂತಿ ಕಾಯ್ದೆ ಹಿಂಪಡೆಯಬೇಕೆಂದು ಒತ್ತಾಯಿಸಿದರು. ಅಮೇರಿಕಾ-ಭಾರತ ವ್ಯಾಪಾರ ಒಪ್ಪಂದವನ್ನು ವಿರೋಧಿಸಿದ ಅವರು, ರಾಜ್ಯ ಸರ್ಕಾರ ಕಾರ್ಮಿಕ ಸಂಹಿತೆಗಳಿಗೆ ನಿಯಮಾವಳಿ ರಚಿಸಬಾರದು ಎಂದರು.

29 ಕಾರ್ಮಿಕ ಕಾನೂನುಗಳನ್ನು ರದ್ದುಗೊಳಿಸಿ 4 ಸಂಹಿತೆಗಳನ್ನು ಜಾರಿಗೆ ತಂದಿರುವುದು ಕಾರ್ಮಿಕರ ಹಕ್ಕುಗಳಿಗೆ ಧಕ್ಕೆಯಾಗಿದೆ. ಅದರಿಂದ ಬಹುಪಾಲು ಕಾರ್ಮಿಕರು ವೇತನ, ಇಎಸ್‌ಐ, ಪಿಎಫ್, ಗ್ರಾಚ್ಯುಟಿ, ಬೋನಸ್ ಹಕ್ಕುಗಳಿಂದ ವಂಚಿತರಾಗುತ್ತಿದ್ದಾರೆ. ಕನಿಷ್ಠ ಹಾಗೂ ಜೀವನೋಪಾಯ ವೇತನದ ಖಾತರಿ ಇಲ್ಲ, ಖಾಯಂ ಉದ್ಯೋಗವನ್ನು ಕಡಿತಗೊಳಿಸಿ ನಿಗದಿತ ಅವಧಿಯ ಉದ್ಯೋಗ ಪದ್ಧತಿಯನ್ನು ಜಾರಿಗೆ ತರಲಾಗಿದೆಂದು ಆರೋಪಿಸಿದರು.

ನರೇಗಾ ಸೇರಿ ಗ್ರಾಮೀಣ ಉದ್ಯೋಗ ಯೋಜನೆಗಳನ್ನು ದುರ್ಬಲಗೊಳಿಸಲಾಗುತ್ತಿದ್ದು, ವಿದ್ಯುತ್ ಖಾಸಗೀಕರಣದಿಂದ ರೈತರು ಹಾಗೂ ಜನಸಾಮಾನ್ಯರಿಗೆ ನಷ್ಟವಾಗುತ್ತಿದೆ. ರೈತರ ಬೆಳೆಗಳಿಗೆ ಬೆಂಬಲ ಬೆಲೆ ನೀಡದೆ ಕಂಪನಿ ಕೃಷಿಯನ್ನು ಉತ್ತೇಜಿಸಲಾಗುತ್ತಿದೆಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯ ನೇತೃತ್ವವನ್ನು ಕಾರ್ಮಿಕ ಸಂಘಟನೆಗಳ ಸಿಐಟಿಯುನ ಸೌಮ್ಯ, ನೇತ್ರಾವತಿ, ಪ್ರೀತು, ಪ್ಲಾಂಟೇಶನ್ ಸಂಘಟನೆಯ ರಮೇಶ್, ಥಾಮಸ್, ಅಕ್ಷರ ದಾಸೋಹದ ಸುಮಿತ್ರ, ಸಾವಿತ್ರಿ, ಸೌಭಾಗ್ಯ, ಗ್ರಾಮ ಪಂಚಾಯಿತಿ ನೌಕರರ ಸಂಘದ ರಾಜು, ಎಐಸಿಸಿಟಿಯುನ ಪ್ರದೀಪ್, ಎಐಟಿಯುಸಿಯ ಹರೀಶ್, ಧರಣೇಶ್, ಹೇಮಲತಾ ವಹಿಸಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019